# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ



ತೀರ್ಥಹಳ್ಳಿಯ ಸೇವಾ ಭಾರತಿ ಟ್ರಸ್ಟ್ ಕೊಪ್ಪ ಹಾಗೂ ಶೃಂಗೇರಿ ತಾಲೂಕಿನ 115 ಸರಕಾರಿ ಕನ್ನಡ ಮಾಧ್ಯಮದ ಶಾಲೆಗಳ ಸುಮಾರು 3500 ವಿದ್ಯಾರ್ಥಿಗಳಿಗೆ ಏಳು ಲಕ್ಷ ರೂಪಾಯಿ ಮೌಲ್ಯದ ಮಳೆ ಅಂಗಿ, ಬ್ಯಾಗ್, ನೋಟ್ ಪುಸ್ತಕಗಳನ್ನು ಉಚಿತವಾಗಿ ವಿತರಿಸಿದೆ.

ಸಂಪುಟ : 37 ಸಂಚಿಕೆ : 22 ದುರ್ಮುಖಿ–ಆಷಾಢ ಕಲಿಯುಗಾಬ್ದ 5117 15–7–2016 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4

## ಅರಿವಿನ ಬೆಳಕಿನೆಡೆಗೆ ನಡೆಸುವ ಗುರುವಿಗೆಮ್ಮಯ ನಮನ

**ಆದಿಗುರು ವ್ಯಾಸರ ಜನ್ಮದಿನ ಆಷಾಢ ಶುಕ್ಲ ಹುಣ್ಣಿಮೆ. ಶಿಕ್ಷಕರಿಗೆ ಜ್ಞಾನದ ಬೆಳಕನ್ನಿತ್ತು ಶ್ರೇಯಸ್ಸಿನೆಡೆಗೆ ನಡೆಯಲು ದಾರಿತೋರುವ ಶಿಕ್ಷಕರನ್ನು ಸ್ಮರಿಸುವ ಗುರುಪೂರ್ಣಿಮೆಯ ನಿಮಿತ್ತ ಈ ಲೇಖನ**



‘ಗುರು’ ಎಂಬ ಶಬ್ದ ಕಿವಿಗೆ ಬಿದ್ದೊಡನೆ ಏನೋ ಒಂದು ಭರವಸೆ, ಆತ್ಮೀಯತೆ, ಗೌರವ ಇವೆಲ್ಲ ಭಾವನೆಗಳು ಓಡೋಡಿ ಬಂದು ಮನಸ್ಸನ್ನು ಮುದಗೊಳಿಸುತ್ತವೆ, ಹದಗೊಳಿಸುತ್ತವೆ. ಸೃಷ್ಟಿ–ಸ್ಥಿತಿ–ಲಯಗಳಿಗೆ ಕಾರಣರಾದ ಬ್ರಹ್ಮ–ವಿಷ್ಣು–ಮಹೇಶ್ವರರಿಗೆ ಸಮನಾದವನು ಗುರು ಎಂಬ ನಂಬಿಕೆ ಎಷ್ಟು ಅರ್ಥಪೂರ್ಣ, ಉದಾತ್ತ!

ಗುರು ಎಂದರೆ ಯಾರು? ಗುರು ಎಂದರೆ ಕಲಿಸುವವನು, ದಾರಿ ತೋರಿಸುವವನು, ಕಾರುಣ್ಯವೇ ಮೈವೆತ್ತವನು. ಮೊದಲ ಗುರು ತಾಯಿ. ಅವಳು ಮಕ್ಕಳನ್ನು ತನಗಿಂತಲೂ ಹೆಚ್ಚಾಗಿ ಪ್ರೀತಿಸುತ್ತಾಳೆ, ಅವರ ಎಲ್ಲ ತಪ್ಪುಗಳನ್ನು ಸಹಿಸಿ ತಿದ್ದುತ್ತಾಳೆ. ಅವಳು ಮುನಿಸಿನಿಂದ ಹೊಡೆದಾಗಲೂ ಮಗು ‘ಅಮ್ಮ’ ಎಂದೇ ಅಳುತ್ತದೆ, ಸಾಂತ್ವನಕ್ಕಾಗಿ ಅಮ್ಮನ ಮಡಿಲನ್ನೇ ಸೇರುತ್ತದೆ. ಬಾಲ್ಯಕಾಲದಲ್ಲಿ ಅವಳು ಹೇಳಿದ್ದೇ ವೇದ, ಅವಳ ಮಮತೆಯ ಆಸರೆಯಲ್ಲಿ ನಡೆವ ಮಾತುಕತೆಯೇ ಉಪನಿಷತ್ತು. ಅವಳಾಡಿದ ವಾತ್ಸಲ್ಯದ ಕಿವಿನುಡಿಗಳು ನಮ್ಮಲ್ಲಿ ಮೌಲ್ಯಗಳನ್ನು ತುಂಬಿದರೆ, ಗದರುವಿಕೆ–ಪೆಟ್ಟುಗಳು ಮರೆಯಲಾರದ ಪಾಠಗಳಾಗುತ್ತವೆ. ಅವಳ ನಡವಳಿಕೆಯ ಅನುಕರಣೆಯಿಂದಾಗಿ ನಮ್ಮ ಸ್ವಭಾವ ರೂಪಿತವಾಗುತ್ತದೆ.

ಬೆಳೆದಂತೆ ಬೆಳೆದಂತೆ ತಿಳಿಯಬೇಕಾದ ವಿಷಯಗಳೂ ಹೆಚ್ಚುತ್ತವೆ, ಔಪಚಾರಿಕವಾಗಿ ಕಲಿಯಲು ಪ್ರಾರಂಭ. ಅಂದು ಗುರುಕುಲಗಳಲ್ಲಿ ಗುರುಗಳ ಸಾನ್ನಿಧ್ಯದಲ್ಲಿ ಶಿಕ್ಷಣ ಲಭಿಸುತ್ತಿತ್ತು. ಇಂದು ಶಾಲೆಗಳಲ್ಲಿ ಶಿಕ್ಷಣ ದೊರೆಯುತ್ತದೆ. ಗುರುಗಳನ್ನು ಗೌರವಿಸುವ ಅಮೋಘ ಪರಂಪರೆಯಲ್ಲಿ ಆರುಣಿ, ಏಕಲವ್ಯ ಮುಂತಾದವರ ಹೆಸರುಗಳು ಚಿರಸ್ಥಾಯಿ.

ಭಾರತದ ಹೆಸರಿನಲ್ಲೇ ಜ್ಞಾನದ ಆರಾಧನೆಯಿದೆ. ‘ಜ್ಞಾನ ಏವ ಪರಾಶಕ್ತಿಃ’, ‘ನ ಹಿ ಜ್ಞಾನೇನ ಸದೃಶಂ’ ಇತ್ಯಾದಿ ವಾಕ್ಯಗಳಲ್ಲಿ ಈ ಭಾವ ಧ್ವನಿತವಾಗಿದೆ. ಡಾ. ಅಬ್ದುಲ್ ಕಲಾಂ “Our's a knowledge based Country” ಎಂದಿದ್ದಾರೆ.

### ಮಹಾಪುರುಷರ ಹಿಂದಿದ್ದರು ಮಹಾಗುರುಗಳು

ಭಾರತದ ಇತಿಹಾಸದಲ್ಲಿ ಆಗಿಹೋಗಿರುವ ಎಲ್ಲ ಮಹಾಪುರುಷರರ ಯಶಸ್ಸಿನ ಹಿಂದೆ ಅವರ ಗುರುಗಳ ಮಾರ್ಗದರ್ಶನ, ಆಶೀರ್ವಾದಗಳಿವೆ, ಶ್ರೀರಾಮಚಂದ್ರನಿಗೆ ವಸಿಷ್ಠ, ವಿಶ್ವಾಮಿತ್ರರು; ಶ್ರೀಕೃಷ್ಣನಿಗೆ ಸಾಂದೀಪನಿ ಋಷಿಗಳು ಹೀಗೆ. ಹಿಂದು ಧರ್ಮದ ಉಳಿವಿಗಾಗಿ ವಿದ್ಯಾರಣ್ಯರು ಹಕ್ಕಬುಕ್ಕರ ಮೂಲಕ ವಿಜಯನಗರ ಸಾಮ್ರಾಜ್ಯ ಸ್ಥಾಪಿಸಿದರು. ಛತ್ರಪತಿ ಶಿವಾಜಿ ಮಹಾರಾಜರಿಗೆ ಹಿಂದವೀ ಸ್ವರಾಜ್ಯದ ಸ್ಥಾಪನೆಗೆ ಪ್ರೇರಣೆ ನೀಡಿದವರು ಸಮರ್ಥ ರಾಮದಾಸರು. ಹಾಗೆಯೇ ಕಾಲಕಾಲಕ್ಕೆ ಸಮಾಜ ಜಿಡ್ಡುಗಟ್ಟಿದಾಗ, ವಿಕೃತಿಗಳು ಮೈದೋರಿದಾಗ ತಿದ್ದುವ, ಸನ್ಮಾರ್ಗಕ್ಕೆ ತರುವ ಪ್ರಯತ್ನ ಮಾಡಿದ ಸಂತ ಪರಂಪರೆ ಅನನ್ಯ. ಹಿಂದು ಸಮಾಜಕ್ಕೆ ಭಗವಾನ್ ಬುದ್ಧ, ಮಹಾವೀರ, ಆದಿಶಂಕರರು, ರಾಮಾನುಜಾಚಾರ್ಯರು, ಮಧ್ವಾಚಾರ್ಯರು, ಗುರುನಾನಕರು, ಮಹಾತ್ಮ ಬಸವೇಶ್ವರರು, ನಾರಾಯಣಗುರುಗಳು ಇತ್ಯಾದಿ ಅನೇಕರ ಕೊಡುಗೆ ಅಸಾಮಾನ್ಯ.

ಆಧುನಿಕ ಭಾರತದ ನಿರ್ಮಾಣದಲ್ಲಿ ಮಹರ್ಷಿ ದಯಾನಂದ ಸರಸ್ವತಿಗಳು, ಯೋಗಿ ಅರವಿಂದರು, ರಾಮಕೃಷ್ಣ ಪರಮಹಂಸ–ವಿವೇಕಾನಂದರು ಮುಂತಾದವರ ಪಾತ್ರ ಹಿರಿದು. ಭಾರತದ ಮೊದಲ ಅಧ್ಯಕ್ಷರಾಗಿದ್ದ ಡಾ. ರಾಧಾಕೃಷ್ಣನ್, ಡಾ. ಅಬ್ದುಲ್ ಕಲಾಂರಂಥವರೂ ಗುರುಸ್ಥಾನದಲ್ಲಿ ನಿಂತು ಯುವಪೀಳಿಗೆಗೆ ಪ್ರೇರಣೆ ನೀಡಿದ್ದಾರೆ.

ನಮ್ಮ ರಾಜ್ಯದಲ್ಲಿ ಮಲ್ಲಾಡಿಹಳ್ಳಿಯ ಸ್ವಾಮಿಗಳು, ಗದಗಿನ ಗಾನಯೋಗಿ ಪಂಚಾಕ್ಷರಿ ಗವಾಯಿಗಳು ಸಾವಿರಾರು ಪೀಡಿತರ ಬಾಳಿಗೆ ಬೆಳಕಾಗಿದ್ದಾರೆ. ಸಿದ್ಧಗಂಗೆಯ ಶ್ರೀಗಳು ಅನ್ನ–ಜ್ಞಾನ ದಾಸೋಹಗಳಿಂದ ಲಕ್ಷಾಂತರ ಜನರ ಬದುಕನ್ನು ರೂಪಿಸಿದ್ದಾರೆ. ತಮ್ಮ ನಿಸ್ಪೃಹ ನಡವಳಿಕೆ, ಸರಳ ಪ್ರವಚನಗಳಿಂದಾಗಿ ಸಿದ್ಧೇಶ್ವರ ಸ್ವಾಮಿಗಳು ನಡೆದಾಡುವ ದೇವರೆಂದೇ ಪ್ರಸಿದ್ಧರು. ಇಂಥ ಎಲ್ಲ ಗುರುಗಳನ್ನು ನೆನೆದು, ಗೌರವಿಸುವ ಪವಿತ್ರ ದಿನವನ್ನು ಇಡೀ ದೇಶದಲ್ಲಿ ಸಂಭ್ರಮ, ಶ್ರದ್ಧೆಗಳಿಂದ ಆಚರಿಲಾಗುತ್ತಿದೆ.

### ಪರಮಪವಿತ್ರ ಭಗವಾ – ರಾಷ್ಟ್ರೀಯ ಸ್ವಯಂಸೇವಕ ಸಂಘದ ಗುರು

ರಾಷ್ಟ್ರೀಯ ಸ್ವಯಂಸೇವಕ ಸಂಘದಲ್ಲಿ ಆರು ಉತ್ಸವಗಳನ್ನು ಆಚರಿಲಾಗುತ್ತದೆ. ಅವುಗಳಲ್ಲಿ ಶ್ರೀ ಗುರುಪೂಜಾ ಉತ್ಸವವೂ ಒಂದು. ಇಲ್ಲಿ ಒಂದು ವಿಶೇಷವೆಂದರೆ, ಯಾವುದೇ ವ್ಯಕ್ತಿಯಲ್ಲ, ಬದಲಿಗೆ ಪರಮಪವಿತ್ರ ಭಗವಾಧ್ವಜವೇ ಗುರು. ಹೀಗೇಕೆ ಎಂಬ ಪ್ರಶ್ನೆ ಮೂಡುವುದು ಅತ್ಯಂತ ಸಹಜ.

ಇದಕ್ಕುತ್ತರ ಬೇಕೆಂದಲ್ಲಿ ಸಂಘಸ್ಥಾಪನೆಯ ಹಿನ್ನೆಲೆಯನ್ನು ಗಮನಿಸಬೇಕಾಗುತ್ತದೆ. ಒಂದೊಮ್ಮೆ ಜಗದ್ಗುರುವಾಗಿದ್ದ, ಸಮೃದ್ಧವಾಗಿದ್ದ, ಅಜೇಯವಾಗಿದ್ದ ಭಾರತ ಆಕ್ರಮಣ, ವಿಕೃತಿಗಳಿಗೆ ಸಿಲುಕಿ ಗುಲಾಮಿತನಕ್ಕೆ ತುತ್ತಾಯಿತು. ಇಡೀ ದೇಶದಲ್ಲಿ ಸ್ವರಾಜ್ಯ ಪ್ರಾಪ್ತಿಗಾಗಿ ಹೋರಾಟ ನಡೆಯಿತು. ಬ್ರಿಟಿಷರನ್ನು ಭಾರತದಿಂದ ಓಡಿಸುವುದೊಂದೇ ಎಲ್ಲ ಸಮಸ್ಯೆಗಳಿಗೆ ಪರಿಹಾರ ಎಂದು ಬಹುತೇಕ ಜನರು ಭಾವಿಸಿದ್ದರು. ಆದರೆ, ಸಂಘಸ್ಥಾಪಕ ಡಾ.ಕೇಶವ ಬಲಿರಾಮ ಹೆಡಗೇವಾರರು ತಮ್ಮ ಅನುಭವ, ಅಧ್ಯಯನಗಳಿಂದ ಭಾರತದ ಪುತ್ರರೂಪಿ ಹಿಂದು ಸಮಾಜದಲ್ಲಿ ಮೂಡಿರುವ ಆತ್ಮಹೀನಾಯತೆ, ಸ್ವಾರ್ಥ, ಅಶಿಸ್ತು ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಸಂಘಟನಾಹೀನತೆಗಳೇ ಈ ದಾಸ್ಯಕ್ಕೆ, ಪತನಕ್ಕೆ ಕಾರಣ ಎಂದು ಕಂಡುಕೊಂಡರು. ಸ್ವಾಮಿ ವಿವೇಕಾನಂದರು, ಸೋದರಿ ನಿವೇದಿತಾ, ಮಹರ್ಷಿ ಅರವಿಂದರು, ಸ್ವಾತಂತ್ರ್ಯವೀರ ಸಾವರಕರ ಮುಂತಾದ ಮಹಾಪುರುಷರೂ ಇದೇ ನಿಷ್ಕರ್ಷೆಗೆ ಬಂದಿದ್ದರು.

ಹಿಂದು ಸಮಾಜವನ್ನು ಸಂಘಟಿಸುವ, ದೋಷಮುಕ್ತವನ್ನಾಗಿಸುವ, ಭಾರತಮಾತೆಯನ್ನು ಮತ್ತೊಮ್ಮೆ ಜಗದ್ಗುರುವನ್ನಾಗಿಸುವ ಉದ್ದೇಶದಿಂದ ಡಾ. ಹೆಡಗೇವಾರರು 1925ರಲ್ಲಿ ಸಂಘವನ್ನು ಸ್ಥಾಪಿಸಿದರು. ಈ ಮಹಾನ್ ಗುರಿಗಾಗಿ ದುಡಿಯುವ ಯೋಗ್ಯ ಕಾರ್ಯಕರ್ತರ ನಿರ್ಮಾಣಕ್ಕಾಗಿ ಶಾಖಾ ಪದ್ಧತಿ ಪ್ರಾರಂಭವಾಯಿತು. ಇಂಥ ಮಹಾನ್ ಲಕ್ಷ್ಯ ಹೊಂದಿರುವವರ ಕಣ್ಮುಂದೆ ಭಾರತದ ಎಲ್ಲ ಪರಂಪರೆಯನ್ನು ಪ್ರತಿನಿಧಿಸುವ ಭಗವಾಧ್ವಜವನ್ನು ಗುರುವನ್ನಾಗಿ ಸ್ವೀಕರಿಸಲಾಗಿದೆ. ಏಕೆಂದರೆ ವ್ಯಕ್ತಿ ಎಷ್ಟೇ ಶ್ರೇಷ್ಠನಾಗಿರಲಿ ಅವನು ಶಾಶ್ವತನೂ

### ಆದಿಗುರು ವ್ಯಾಸ



ವಿಸ್ತಾರವಾಗಿ ಬೆಳೆದಿದ್ದ ವೈದಿಕ ಸಾಹಿತ್ಯವನ್ನು ಸಂಕಲಿಸಿದ ಕೃಷ್ಣದ್ವೈಪಾಯನರು ವೇದವ್ಯಾಸರೆಂದೇ ಹೆಸರಾದರು. ವೇದಗಳನ್ನು ವಿಂಗಡಿಸಿ, ಶಿಷ್ಯ ಪರಂಪರೆಯ ಮೂಲಕ ವೇದಗಳ ಪ್ರಸಾರಕ್ಕೂ ಕಾರಣರಾದರು. 18 ಪುರಾಣ, ಮಹಾಭಾರತಗಳ ಮೂಲಕ ಭಾರತೀಯ ಜೀವನದ ಮೇಲೆ ಅಚ್ಚಳಿಯದ ಪ್ರಭಾವ ಬೀರಿದ್ದಾರೆ. ಮಹಾಭಾರತದ ಭಾಗವಾಗಿರುವ ಭಗವದ್ಗೀತೆಯಂತೂ ಜಗನ್ಮಾನ್ಯವಾಗಿದೆ, ವರ್ಷಗಳು ಕಳೆದಂತೆ ಗೀತೆ ಜೀವನಗ್ರಂಥವಾಗಿ ಜನಪ್ರಿಯವಾಗುತ್ತಿದೆ. ಇಂಥ ಚಿರಂತನ ಕಾರ್ಯ ಮಾಡಿದ ವೇದವ್ಯಾಸರನ್ನು ‘ಆದಿ ಗುರು’ ಎಂದು ನಮ್ಮ ದೇಶದ ಪರಂಪರೆಯಲ್ಲಿ ಗೌರವಿಸಲಾಗಿದೆ. ಆಷಾಢ ಮಾಸದ ಹುಣ್ಣಿಮೆಯನ್ನು ಸಮಸ್ತ ಗುರುಪರಂಪರೆಯನ್ನು ಗೌರವಿಸುವ ‘ವ್ಯಾಸ ಪೂರ್ಣಿಮೆ’ ಉತ್ಸವವಾಗಿ ಆಚರಿಸಲಾಗುತ್ತದೆ.

‘ಉತ್ಸವ’ ಎಂದರೆ ಮೇಲಕ್ಕೆತ್ತುವುದು ಎಂಬರ್ಥ. ಈ ರೀತಿ ಪ್ರತಿ ಹಬ್ಬವೂ ಆನಂದವನ್ನು ಕೊಡುವುದರ ಜೊತೆಗೆ ಜೀವನವನ್ನು ಉನ್ನತಗೊಳಿಸುವ ಸಂಸ್ಕಾರ ನೀಡುತ್ತದೆ. ‘ಶ್ರದ್ಧಾವಾನ್ ಲಭತೇ ಜ್ಞಾನಂ– ಜ್ಞಾನಾರ್ಜನೆಗೆ ಶ್ರದ್ಧೆ ಇರಬೇಕು. ಅದರಂತೇ ಗುರುಹಿರಿಯರ ಬಗ್ಗೆ ಶ್ರದ್ಧಾ, ಭಕ್ತಿಗಳನ್ನು ಬೆಳೆಸುವುದೇ ಗುರುಪೂಜಾ ಉತ್ಸವದ ಹಿಂದಿರುವ ಉದ್ದೇಶ.

ಅಲ್ಲ, ಅವನಲ್ಲಿ ಕೆಡುಕುಗಳೂ ಬಂದುಬಿಡಬಹುದು. ಎಂದಿಗೂ ವ್ಯಕ್ತಿಪೂಜೆಗಿಂತ ಧ್ಯೇಯದಾರಾಧನೆಯೇ ಹಿರಿದಾದದ್ದು. ಹೀಗಾಗಿ ತತ್ತ್ವರೂಪಿ ಭಗವೆಯೇ ನಮಗೆ ಗುರು.

ಪರಮಪವಿತ್ರ ಭಗವಾಧ್ವಜ ಜ್ಞಾನದ ಸಂಕೇತ. ಉದಿಸುವ ಸೂರ್ಯನ ಬಣ್ಣ ಕೇಸರಿ. ಹಾಗೆಯೇ ಕೇಸರಿ ತ್ಯಾಗದ ಪರಮಾದರ್ಶವನ್ನೂ ಪ್ರತಿನಿಧಿಸುತ್ತದೆ – ಸನ್ಯಾಸಿಗಳು ಇದೇ ಬಣ್ಣದ ವಸ್ತ್ರ ಧರಿಸುತ್ತಾರೆ. ಭಗವಾ ಧರ್ಮಕ್ಕೇ ಜಯವೆಂಬ ನಮ್ಮ ಶ್ರದ್ಧೆಯ ಪ್ರತೀಕವೂ ಹೌದು. ಶ್ರೀರಾಮನ, ಶ್ರೀಕೃಷ್ಣನ, ರಾಣಾ ಪ್ರತಾಪನ, ಛತ್ರಪತಿ ಶಿವಾಜಿ ಮಹಾರಾಜರ ರಥಗಳ ಮೇಲೆ ರಾರಾಜಿಸಿದ್ದ ಭಗವಾಧ್ವಜ ನಮ್ಮ ಹಿರಿಯರ ಸಾಹಸ, ಶೌರ್ಯಗಳನ್ನು ನೆನಪಿಸುತ್ತದೆ. ಇವೆಲ್ಲ ಕಾರಣಗಳಿಂದಾಗಿಯೇ ಭಗವಾಧ್ವಜ ಹಿಂದುಧರ್ಮದ ಧ್ವಜವಾಗಿ ಸನಾತನ ಕಾಲದಿಂದಲೂ ಶೋಭಿಸುತ್ತಿದೆ. ಈ ಧ್ವಜದ ಮುಂದೆ ಸಂಘದ ಸ್ವಯಂಸೇವಕ ಪ್ರತಿನಿತ್ಯ ಸಾಧನೆ ಮಾಡುತ್ತಾನೆ, ಶರೀರ–ಮನ–ಬುದ್ಧಿಗಳನ್ನು ದೇಶಕಾರ್ಯಕ್ಕೆ ಸಜ್ಜುಗೊಳಿಸುತ್ತಾನೆ, ಭಾರತಮಾತೆಯ ವೈಭವಕ್ಕಾಗಿ ಜೀವನಸರ್ವಸ್ವವನ್ನೂ ಅರ್ಪಿಸುವ ಸಂಕಲ್ಪವನ್ನು ಮಾಡುತ್ತಾನೆ. ನಿತ್ಯ ಗುರುವಿನ ಮುಂದೆ ಸಾಧನಾರತ ಸ್ವಯಂಸೇವಕನಿಗೆ, ತನ್ನ ಗುರುವನ್ನು ಪೂಜಿಸುವ ಈ ಸಂದರ್ಭ ಅತ್ಯಂತ ಸೌಭಾಗ್ಯದ್ದು. ವರ್ಷವಿಡೀ ತನು–ಮನಗಳಿಂದ ದೇಶಕಾರ್ಯದಲ್ಲಿ ಲೀನವಾಗಿರುವ ಸ್ವಯಂಸೇವಕನಿಗೆ ಇಂದು ಧನವನ್ನೂ ಸಮರ್ಪಿಸುವ ಅಪರೂಪದ ಅವಕಾಶ!

ಹೂವುಗಳಿಂದ ಪೂಜಿಸುವ ಕ್ರಿಯೆಯ ಹಿಂದೆ ಇರುವ ಭಾವ ಸಮರ್ಪಣೆಯದ್ದೇ. ಇದ್ದುದೆಲ್ಲವ ಕೊಟ್ಟು ಬರಿದಾಗಿ ಧ್ಯೇಯರೂಪವೇ ಆದ ಡಾಕ್ಟರ್‌ಜಿಯವರ ಜೀವನ ನಮ್ಮ ಮುಂದಿರುವ ಆದರ್ಶ. ಸಮರ್ಪಿತ ಸ್ವಯಂಸೇವಕರ ಕ್ರಿಯಾಶಕ್ತಿಯಿಂದಾಗಿಯೇ ಎಲ್ಲ ವಿರೋಧಗಳನ್ನು ಮೆಟ್ಟಿನಿಂತು ಹಿಂದು ಸಮಾಜಕ್ಕೆ ಶಕ್ತಿತುಂಬುವಲ್ಲಿ ಯಶಸ್ವಿಯಾಗಿದೆ. ಸಮಾಜದ ಹಿರಿಯರು ಸಂಘವನ್ನು ಆಶಾಕಿರಣವಾಗಿ ನೋಡುತ್ತಿದ್ದಾರೆ.

### ಮತ್ತೆ ಜಗದ್ಗುರುವಾಗಲಿ ಭಾರತ

ಇಡೀ ಜಗತ್ತು ಮತೀಯ ಭಯೋತ್ಪಾದನೆಯಿಂದ ಬೆಚ್ಚಿಬಿದ್ದಿದೆ, ಅತಿಯಾದ ವ್ಯಕ್ತಿಕೇಂದ್ರಿತ ಚಿಂತನೆಯಿಂದಾಗಿ ಸಮಾಜಜೀವನ ಉಧ್ವಸ್ಥವಾಗಿದೆ, ಮಿತಿಮೀರಿದ ಭೋಗವಾದದಿಂದಾಗಿ ಪ್ರಕೃತಿಯ ಸಂತುಲನ ಹದಗೆಟ್ಟು, ಜಗತ್ತು ವಿನಾಶದ ಅಂಚಿನೆಡೆಗೆ ನಡೆದಿದೆ. ಇದಕ್ಕೆಲ್ಲ ಭಾರತೀಯ ಜೀವನಶೈಲಿ, ಹಿಂದು ಚಿಂತನೆಗಳೇ ಪರಿಹಾರ. ಸಂಘದ ಶಕ್ತಿ ಬೆಳೆದಂತೆಲ್ಲ ಹಿಂದು ಸಮಾಜದಲ್ಲಿ ವಿಶ್ವಾಸವೂ ಬೆಳೆದಿದೆ, ಜಗತ್ತಿನಲ್ಲಿ ಮತ್ತೊಮ್ಮೆ ಭಾರತದ ಬಗ್ಗೆ ಗೌರವ ಹೆಚ್ಚುತ್ತಿದೆ. ಭಾರತದ ಯೋಗ, ಪ್ರಾಣಾಯಾಮ, ಧ್ಯಾನ, ಆಯುರ್ವೇದ, ಕುಟುಂಬ ಪದ್ಧತಿ, ಕಲೆ–ಸಾಹಿತ್ಯ–ಸಂಗೀತಗಳು ಜಗತ್ತನ್ನು ಆವರಿಸಿವೆ.

ಈ ಸಂದರ್ಭದಲ್ಲಿ ಎಲ್ಲ ಸಜ್ಜನಶಕ್ತಿ ಭಾರತಮಾತೆಯನ್ನು ಜಗದ್ಗುರುವನ್ನಾಗಿಸುವ, ತನ್ಮೂಲಕ ಜಗತ್ತಿನ ಕಲ್ಯಾಣದ ಹೆಬ್ಬಯಕೆಯನ್ನು ಧರಿಸಿ ಕಾರ್ಯಪ್ರವೃತ್ತವಾಗಲೇಬೇಕು. ಇದಕ್ಕಾಗಿ ಸಂಘಕಾರ್ಯದ ವಿಸ್ತಾರವಾಗಲೇಬೇಕು. ಈ ನೆಲೆಯಲ್ಲಿ ನಾವೆಲ್ಲರೂ ಇನ್ನಷ್ಟು ಹೆಚ್ಚು ಸಮಯ ಕೊಟ್ಟು ಸಂಘಕಾರ್ಯದಲ್ಲಿ, ಸಾಮಾಜಿಕ ಪರಿವರ್ತನೆಯ ಕಾರ್ಯದಲ್ಲಿ ತೊಡಗಬೇಕು. ಸಂಘಕಾರ್ಯಕ್ಕಾಗಿ ಸರ್ವಸ್ವವನ್ನು ಧಾರೆಯೆರೆದಿರುವ ಅನೇಕ ಹಿರಿಯರ ಆದರ್ಶ ನಮ್ಮ ಮುಂದೆ ಇದ್ದೇ ಇದೆ. "ಅನೇಕ ಹೂಗಳು ಅರಳುತ್ತವೆ, ಅರಳಿ ಬಾಡಿ ಉದುರಿ ಹೋಗುತ್ತವೆ, ಅವನ್ನು ಯಾರು ತಾನೆ ಲೆಕ್ಕಿಸುತ್ತಾರೆ ? ಆದರೆ, ಗಜೇಂದ್ರನು ಶ್ರೀಹರಿಯ ಪೂಜೆಗೆ ಕಿತ್ತು ಅರ್ಪಿಸಿದ ತಾವರೆಯೇ ಧನ್ಯ. ಅಂತಯೇ ದೇಶಮಾತೆಯ ಬಿಡುಗಾಗಿ ಅರ್ಪಿತವಾದ ಜೀವನಪುಷ್ಪಗಳೇ ಧನ್ಯ, ಪಾವನ" ಈ ಸಾವರಕರರ ಅಮರವಾಣಿ ನಮಗೆ ಪ್ರೇರಣೆ. 'ಭಾರತ್ ಮಾತಾ ಕೀ ಜಯ್' ಈ ಸಂಕಲ್ಪದೊಂದಿಗೆ, ಪರಮ ಪವಿತ್ರ ಭಗವೆಯ ಅಡಿಯಲ್ಲಿ ನಮ್ಮ ಸಾಧನೆಯನ್ನು ಇನ್ನಷ್ಟು ತೀವ್ರಗೊಳಿಸೋಣ.

# ಮಿಶ್ರ ಬೆಳೆಯ ಸಾಧಕ ಧನಪಾಲ್ ಯಲ್ಲಟ್ಟಿ




ಕಡಿಮೆ ಹೂಡಿಕೆ ಮತ್ತು ಹೆಚ್ಚು ಆದಾಯ ಪಡೆಯಲು ಹರಸಾಹಸ ಪಡುವ ವಾಣಿಜ್ಯೋದ್ಯಮಿಗಳಿಗಿಂತ ಭೂತಾಯಿಯ ಮಡಿಲಲ್ಲಿ ಕಡಿಮೆ ಕಾಲಾವಧಿ ಮತ್ತು ವೆಚ್ಚದಲ್ಲಿ ಹೆಚ್ಚಿನ ಇಳುವರಿಯನ್ನು ಮಿಶ್ರ ಬೆಳೆ ಪದ್ಧತಿ ಮೂಲಕ ಪಡೆಯಬಹುದು ಎಂಬುದನ್ನು ಜಮಖಂಡಿ ತಾಲ್ಲೂಕಿನ ಹಳಿಂಗಳಿಯ ರೈತ ಧನಪಾಲ್ ಯಲ್ಲಟ್ಟಿ ತೋರಿಸಿಕೊಟ್ಟಿದ್ದಾರೆ.

2010ರಲ್ಲಿ ಕೃಷಿ ಪಂಡಿತ ಮತ್ತು 2012ರಲ್ಲಿ ಕೃಷಿರತ್ನ ಪ್ರಶಸ್ತಿ ಪಡೆದಿರುವ ಹಳಿಂಗಳಿಯ ಧನಪಾಲ್ ಯಲ್ಲಟ್ಟಿ ಸುಮಾರು ಒಂದೂವರೆ ಎಕರೆ ಪ್ರದೇಶದಲ್ಲಿ 4 ಮಿಶ್ರ ಬೆಳೆಯನ್ನು ಬೆಳೆದು ಕೇವಲ ಐದುವರೆ ತಿಂಗಳಲ್ಲಿ 7 ಲಕ್ಷಕ್ಕೂ ಅಧಿಕ ಲಾಭ ಗಳಿಸಿ, ಕಡಿಮೆ ನೆಲದಲ್ಲೂ ಹೆಚ್ಚಿನ ವರಮಾನ ಪಡೆಯಬಹುದೆಂಬುದನ್ನು ನಿರೂಪಿಸಿದ್ದಾರೆ. ಇವರು ಕಲಿತಿದ್ದು ಮಾತ್ರ ಎಸ್‌ಎಸ್‌ಎಲ್‌ಸಿ. ಆದರೆ ಕೃಷಿಯಲ್ಲಿ ಮಾತ್ರ ಹಲವಾರು ಬಗೆಯ ವಿಭಿನ್ನ ಪ್ರಯೋಗಗಳನ್ನು ಮಾಡಿದ್ದಾರೆ.



ರಬಕವಿಗೆ ಸಮೀಪದ ಹಳಿಂಗಳಿ ತೇರದಾಳ ರಸ್ತೆಯ ಹತ್ತಿರದ ತಮ್ಮ ತೋಟದಲ್ಲಿ ಒಂದೂವರೆ ಎಕರೆ ಭೂಮಿಯನ್ನು ಮಿಶ್ರ ಬೆಳೆ ಬೆಳೆಯಲು ನಿರ್ಧರಿಸಿ ಮೊದಲು ಡಿಎಪಿ 1 ಕ್ವಿಂಟಾಲ್, ಪೋಟ್ಯಾಷ 50 ಕೆಜಿ, ಆಮಿನೋ ಐ – 16 ಕೆಜಿ, ಗ್ರೀನ್ ಕ್ರಾಪ್ 108 – 20 ಕೆಜಿ, 1ಕ್ವಿಂಟಾಲ ಬೇವಿನ ಹಿಂಡಿ, ಎಸ್‌ಎಪಿ 80ಕೆಜಿ ಹಾಕಿ ಸಾಲಿನಿಂದ ಸಾಲಿಗೆ 5 –ಫೂಟ್ ಬೆಡ್ಡ್ ಸಿಸ್ಟಿಮ್ ಮಾಡಿ ಮಲ್ಚಿಂಗ್ ಪೇಪರನಲ್ಲಿ ಹನಿ ನೀರಾವರಿ ಅಳವಡಿಸಿ ಗುಣಿಯಿಂದ ಗುಣಿಗೆ ಒಂದೂವರೆ ಫೂಟ್‌ಗೆ ಶುಗರ ಕ್ವೀನ್ ತಳಿಯ ಕಲ್ಲಂಗಡಿಯನ್ನು ಒಂದೂವರೆ ಎಕರೆಗೆ 7000 ಸಸಿ ನಾಟಿ ಮಾಡಲಾಗಿದ್ದು, ಆದರಂತೆ ಒಂದು ಲೈನ್ ಮಧ್ಯದಲ್ಲಿ 4 ಫೂಟ್‌ಗೆ ಒಂದು ಬದನೆ ಗಿಡದಂತೆ 400 ಗಿಡ ನೆಡಲಾಗಿದೆ. ಬದನೆಯ ಎರಡು ಮಧ್ಯದಲ್ಲಿ ಮೆನಸಿನ ಗಿಡ ಹಾಗೂ ಎದುರು ಬದಿರುನಲ್ಲಿ ಸವತೆ ಸಸಿಯನ್ನು ನಾಟಿ ಮಾಡಿದ್ದೇವೆ ಎನ್ನುತ್ತಾರೆ ಧನಪಾಲ್.

ಪ್ರತಿ 4 ದಿನಗಳಿಗೊಮ್ಮೆ ವಾತಾವರಣಕ್ಕೆ ಅನುಗುಣವಾಗಿ ಶಿಲಿಂಧ್ರ ನಾಶಕ ಸಿಂಪಡಿಸುವುದರ ಜೊತೆಗೆ ಬೆಳೆಯ ಬೆಳವಣಿಗೆಗೆ ಉತ್ತೇಜನ ಒದಗಿಸುವ ಸಲುವಾಗಿ ಆಯಂಪಲ್, ಮಿಂಗಲ್ ಮತ್ತು ಉಪಮ್ ನಂತಹ ಸಿಂಪರಣೆಗಳನ್ನು ನೀಡಿದ್ದಾರೆ ಮತ್ತು ಹಚ್ಚಿದ ಎಂಟು ದಿನಗಳ ನಂತರ ಪ್ರತಿ 2ದಿನಕ್ಕೊಮ್ಮೆ ನೀರಿನಲ್ಲಿ ಕರಗುವ ಎಸ್‌ಎಪಿ, ಸಾರಜನಕ, ಗೊಬ್ಬರಗಳನ್ನು ಬಳಸಲಾಗಿದೆ. ಬೆಳೆಗಳಿಗೆ ಡ್ರಿಪ್ ಮೂಲಕ ನೀರು ಒದಗಿಸಲಾಗುತ್ತಿದ್ದು, ಹಚ್ಚಿದ 1 ರಿಂದ 10 ದಿನಗಳ ವರೆಗೆ ಒಂದು ದಿನಕ್ಕೆ 20 ನಿಮಿಷ, 10 ರಿಂದ 20 ದಿನಗಳ ವರೆಗೆ 30ರಿಂದ 40 ನಿಮಿಷ, 20 ರಿಂದ 35 ದಿನಗಳವರೆಗೆ 1 ತಾಸು, 35ರಿಂದ 45 ದಿನಗಳವರೆಗೆ 1 ವರೆ ತಾಸು, 45ರಿಂದ 50ದಿನಗಳ ವರೆಗೆ 2 ತಾಸು ನಂತರ 50 ರಿಂದ 55 ದಿನಗಳವರೆಗೆ 1 ತಾಸು ಹೀಗೆ ದಿನಕಳೆದಂತೆ ನೀರಿನ ಪ್ರಮಾಣ ಕಡಿಮೆ ಮಾಡುತ್ತಾ ಬಂದಿದ್ದೇವೆ. ಇದರಿಂದ ಕಡಿಮೆ ನೀರಿನಲ್ಲಿ ಉತ್ತಮ ಬೆಳೆ ಹಾಗೂ ಲಾಭ ಮಾಡಿಕೊಳ್ಳಬಹುದು ಎಂದು ಧನಪಾಲ್ ಹೇಳುತ್ತಾರೆ.

ಹೆಚ್ಚಿನ ಮಾಹಿತಿಗಾಗಿ ಧನಪಾಲ ಎನ್. ಯಲ್ಲಟ್ಟಿ, ಹಳಿಂಗಳಿ ಗ್ರಾಮ, ತಾ. ಜಮಖಂಡಿ, (ಜಿ) ಬಾಗಲಕೋಟೆ



**ರಣಬಿಸಿಲಿನ ಝಳದ ಪರಿವೆ ಇಲ್ಲದೆ ಭಾರತ–ಪಾಕಿಸ್ತಾನದ ಗಡಿಯುದ್ದಕ್ಕೂ ಕಾವಲು ಕಾಯುವ ಕಾವಲು ಭದ್ರತಾ ಪಡೆಯ (BSF) ಯೋಧರಿಗಾಗಿ ಸೂರತ್ ಮತ್ತು ಮುಂಬೈಯ ವಜ್ರ ಮತ್ತು ಹರಳು ವ್ಯಾಪಾರಿಗಳು 10,000 ತಂಪು ಕನ್ನಡಕ, ಆರ್.ಓ. ನೀರು ಸಂಸ್ಕರಣಾ ಯಂತ್ರಗಳು, ಈ.ಸಿ.ಜಿ ಯಂತ್ರಗಳು, ಕ್ಷ–ಕಿರಣ ಯಂತ್ರಗಳು, ವೈದ್ಯಕೀಯ ಪ್ರಯೋಗಾಲಯದ ಉಪಕರಣಗಳು, ಆಂಬುಲೆನ್ಸ್, 10 ಆಮ್ಲಜನಕ ಸಿಲಿಂಡರ್, 7,000 ಹಾಸಿಗೆ ಸೇರಿದಂತೆ ಹಲವು ಉಪಯುಕ್ತ ವಸ್ತುಗಳನ್ನು ದಾನವಾಗಿ ನೀಡಿದ್ದಾರೆ. ಗುಜರಾತಿನ ನಡಾಬೇಟ್‌ನಲ್ಲಿ ನಡೆದ ಸಮಾರಂಭವೊಂದಲ್ಲಿ ಕೇಂದ್ರ ಗೃಹಮಂತ್ರಿ ರಾಜನಾಥ ಸಿಂಗ್ ಈ ಘಟನೆಗೆ ಸಾಕ್ಷಿಯಾದರು. ಇಷ್ಟೇ ಅಲ್ಲದೇ ಪ್ರತಿ ವ್ಯಾಪಾರಿಯೂ ತಲಾ 15 ಲಕ್ಷದಂತೆ ಮೂರು ಬಿಎಸ್‌ಎಫ್ ಆಸ್ಪತ್ರೆಗಳ ಉನ್ನತಿಕರಣಕ್ಕೆ ಹಣ ಸಂಗ್ರಹಿಸಿ ನೀಡಿದ್ದಾರೆ. ಗಾಂಧಿನಗರ ವ್ಯಾಪ್ತಿಯಲ್ಲಿ ಅಧ್ಯಯನ ಮಾಡುತ್ತಿರುವ ಹುತಾತ್ಮ ಸೇನಾ ಜವಾನರ ಮಕ್ಕಳಿಗಾಗಿ ಮನೆಗಳ ನಿರ್ಮಾಣದಲ್ಲಿಯೂ ಸಹಕಾರ ನೀಡುವ ಭರವಸೆ ನೀಡಿದ್ದಾರೆ.**

# ಮೊಬೈಲ್ ಛಾಯಾಗ್ರಹಣ




ಛಾಯಾಗ್ರಹಣ ಒಂದು ಕಲೆ. ದುಬಾರಿ ಕ್ಯಾಮರಾಗಳಲ್ಲಿ ಉತ್ತಮ ಛಾಯಾಗ್ರಹಣಕ್ಕೆ ಸಾಕಷ್ಟು ಅವಕಾಶಗಳನ್ನು ನೀಡಿರುತ್ತಾರೆ. ಆದರೆ ಇತ್ತೀಚಿನ ಸ್ಮಾರ್ಟ್‌ಫೋನುಗಳಲ್ಲಿ ಕ್ಯಾಮರಾ ಸಾಕಷ್ಟು ಸುಧಾರಣೆಯಾಗಿರುವುದರಿಂದ ಅದನ್ನೇ ಬಳಸಿ ಫೋಟೊ ತೆಗೆಯುವುದು ಸಾಮಾನ್ಯವಾಗಿದೆ. ಹೆಚ್ಚಿನ ಗುಣಮಟ್ಟದ ಫೋಟೊ ಬೇಕಾದರೆ ಏನು ಮಾಡಬೇಕೆಂಬ ಕೆಲವು ಸಲಹೆಗಳು ಇಲ್ಲಿವೆ.

ಒಂದು ಸ್ವಚ್ಛ ಬಟ್ಟೆ ಅಥವಾ ಹತ್ತಿಯನ್ನು ಬಳಸಿ ಕ್ಯಾಮರಾ ಲೆನ್ಸ್ ಸ್ವಚ್ಛಗೊಳಿಸಿ. ಅದರಲ್ಲಿರಬಹುದಾದ ಸಣ್ಣ ಧೂಳು ಅಥವಾ ಕಸ ಚಿತ್ರದ ಗುಣಮಟ್ಟವನ್ನು ಗಣನೀಯವಾಗಿ ಕಡಿಮೆಯಾಗುವಂತೆ ಮಾಡುತ್ತದೆ.

ಛಾಯಾಗ್ರಹಣದಲ್ಲಿ ಬೆಳಕು ಅತಿ ಮುಖ್ಯವಾಗಿದೆ. ಸಾಮಾನ್ಯ ಕ್ಯಾಮರಾಗಳಲ್ಲೂ ಉತ್ತಮ ಚಿತ್ರ ಬೇಕಾದರೆ ಸಾಕಷ್ಟು ಬೆಳಕಿರುವಂತೆ ನೋಡಿಕೊಳ್ಳಿ. ಬೆಳಕಿನ ಮೂಲ (ಸೂರ್ಯ, ದೀಪ ಇತ್ಯಾದಿ)ದ ವಿರುದ್ಧ ದಿಕ್ಕಿನಲ್ಲಿ ವಸ್ತುವಿರಲಿ.

ಡಿಜಿಟಲ್ ಝೂಮ್ ಬೇಡ. ಇದು ಚಿತ್ರದ ಗುಣಮಟ್ಟವನ್ನು ಗಣನೀಯವಾಗಿ ತಗ್ಗಿಸುತ್ತದೆ. ದೊಡ್ಡ ಗಾತ್ರದ lens ಅಳವಡಿಸಲು ಮೊಬೈಲಿನ ಗಾತ್ರದ ಕಾರಣದಿಂದಾಗಿ ಸಾಧ್ಯವಿಲ್ಲವಾಗಿರುವ ಕಾರಣ, ಆಪ್ಟಿಕಲ್ ಝೂಮ್ ಆಯ್ಕೆ ಸಾಮಾನ್ಯವಾಗಿ ಇರುವುದಿಲ್ಲ. ನೀವು ದೂರದಿಂದ ಛಾಯಾಗ್ರಹಣ ಮಾಡುವ ಅನಿವಾರ್ಯತೆಯಿದ್ದಲ್ಲಿ ಚಿತ್ರವನ್ನು ಮತ್ತೆ ಕ್ರಾಪ್ ಮಾಡುವುದು ಉತ್ತಮ.

ನಿಮ್ಮ ಮೊಬೈಲ್ ಕ್ಯಾಮರದ ಸೆಟ್ಟಿಂಗ್ ಬಗ್ಗೆ ತಿಳಿದುಕೊಳ್ಳಿ. ಆಟೋ ಮೋಡ್ ಬಳಸುವ ಬದಲು ಯಾವ ಸೆಟ್ಟಿಂಗ್ ಬಳಸಿದರೆ ಉತ್ತಮ ಚಿತ್ರ ಬರುತ್ತದೆ ಎಂಬುದನ್ನು ಪರಿಶೀಲಿಸಿ. ಕೆಲವು ಮೊಬೈಲುಗಳಲ್ಲಿ ಫೋಕಸ್ ಅವಕಾಶವನ್ನು ನೀಡಿರುತ್ತಾರೆ,. ನೀವು ಪರದೆಯ ಮೇಲೆ ಮೂಡುವ ಚಿತ್ರದ ಭಾಗವನ್ನು ಮುಟ್ಟಿ ಅಲ್ಲಿಗೆ ಫೋಕಸ್ ಆಗುವಂತೆ ಮಾಡಬಹುದು.

ಅಗತ್ಯವಿದ್ದರೆ ಮಾತ್ರ ಫ್ಲಾಶ್ ಬಳಸಿ. ಅನೇಕ ಬಾರಿ ಫ್ಲಾಷ್ ಬೆಳಕು ಇಲ್ಲದೆಯೇ ಚಿತ್ರದ ಗುಣಮಟ್ಟ ಚೆನ್ನಾಗಿ ಕಾಣಿಸುತ್ತದೆ. ಫ್ಲಾಷ್ ಬೆಳಕು ಕೃತಕವೆನಿಸುತ್ತದೆ. ಕೊಠಡಿಯೊಳಗೆ ಚಿತ್ರ ಸೆರೆಹಿಡಿಯುವುದಾದಲ್ಲಿ ಚೆನ್ನಾಗಿ ಬೆಳಕಿರುವಂತೆ ನೋಡಿಕೊಳ್ಳಿ.

ಅತಿಯಾದ ದೂರದಿಂದ ಉತ್ತಮ ಚಿತ್ರ ಬರದು. ಸಾಧ್ಯವಾದಷ್ಟು ಹತ್ತಿರ ಹೋಗಿ.

ಚಿತ್ರವನ್ನು ಸೆರೆಹಿಡಿದ ನಂತರ ಅದನ್ನು ಉತ್ತಮಗೊಳಿಸುವ ಆಪ್‌ಗಳು ಸಿಗುತ್ತವೆ. Snapseed, Afterfocus, instagram, photo director, photoshop express ಇಂತಹ ಕೆಲವು ಆಪ್‌ಗಳು.

ಖಾಲಿ ಜಾಗ, ಆಕಾಶ, ಗೋಡೆಗಳೇ ಅತಿಯಾಗಿ ಮುಖ್ಯ ವಸ್ತು ಚಿತ್ರದ ಅತಿ ಕಡಿಮೆ ಪ್ರದೇಶವನ್ನು ಆವರಿಸಿದರೆ ಅದು ಅಷ್ಟೊಂದು ಪರಿಣಾಮಕಾರಿಯಾಗಿರುವುದಿಲ್ಲ.

ನಿಮ್ಮ ಕ್ಯಾಮರಾ ಸುಲಭವಾಗಿ ಸಿಗುವಂತೆ ಮೊಬೈಲ್ ಸಿದ್ಧಪಡಿಸಿರಿ. ಲಾಕ್ ಸ್ಕ್ರೀನ್ ಐಕಾನ್ ಅಥವಾ ಅದಕ್ಕಾಗಿಯೇ ಪ್ರತ್ಯೇಕ ಬಟನ್ ಆಯ್ಕೆಗಳನ್ನು ಕೆಲವು ಸ್ಮಾರ್ಟ್‌ಫೋನುಗಳಲ್ಲಿ ನೀಡಲಾಗಿರುತ್ತದೆ. ಯಾವಾಗ ಉತ್ತಮ ಚಿತ್ರ ಸೆರಿಹಿಡಿಯುವ ಅವಕಾಶಗಳು ಸಿಗುತ್ತವೆ ಎಂದು ಹೇಳಲಾಗುವುದಿಲ್ಲ. ನಾವು ತಯಾರಾಗಿಯೇ ಇರಬೇಕಾಗುತ್ತದೆ.

ಸ್ಥಿರವಾಗಿ ನಿಲ್ಲಿ ಮತ್ತು ಮೊಬೈಲನ್ನು ಭದ್ರವಾಗಿ ಹಿಡಿದುಕೊಳ್ಳಿ. ಕೈ ಅಲುಗಾಡಿದರೆ ಚಿತ್ರ ಚೆನ್ನಾಗಿ ಬರದು.

ಹಳೆಯ ಕ್ಯಾಮರಾಗಳಂತೆ ಪ್ರತಿ ಚಿತ್ರಕ್ಕೂ ನಾವು ರೀಲ್ ವ್ಯಯಿಸಬೇಕಾಗಿಲ್ಲ. ಅಗತ್ಯಕ್ಕಿಂತ ತುಸು ಹೆಚ್ಚೇ ಕ್ಲಿಕ್‌ಗಳನ್ನು ಮಾಡಿ. ಚೆನಾಗಿರುವುದನ್ನು ಬಿಟ್ಟಿ ಮಿಕ್ಕವನ್ನು ಮತ್ತೆ ಡಿಲೀಟ್ ಮಾಡಬಹುದಲ್ಲ?

ಸಂಪಾದಕೀಯ ಸಹಕಾರ ರಘುನಂದನ್, ಸತ್ಯನಾರಾಯಣ ಶಾನುಬೋಗ್, ಶ್ರೀಹರ್ಷ ಪೆರ್ಲ, ಪ್ರವೀಣ್ ಪಟವರ್ಧನ್, ಶೈಲೇಶ್ ಕುಲಕರ್ಣಿ, ಪ್ರತಾಪ ಕೊಡಂಚ, ರಾಧಾಕೃಷ್ಣ ಹೊಳ್ಳ, ಮೊಳಹಳ್ಳಿ ಅನಿಲ್‌ಕುಮಾರ್

ತಮಿಳು ದಿನಪತ್ರಿಕೆಯ ಹಿರಿಯ ಪತ್ರಕರ್ತರಾದ ಎಲ್. ಮುರುಗರಾಜ್ ದೀನಮಲಾರ್ ಹಲವು ವರ್ಷಗಳಿಂದ ಅಂಕಣದ ಮೂಲಕ ಸಮಾಜಪರ ಕೆಲಸಮಾಡುವ ನಿಜ ಜೀವನದ ಸಾಧಕರ ಪರಿಚಯ ಮಾಡಿಸುತ್ತಿದ್ದಾರೆ. ತಮ್ಮ ಪ್ರತಿ ಅಂಕಣದ ಮೂಲಕ ಅವರು ಸಮಾಜದ ಕುರಿತು ಕಾಳಜಿ ಉಳ್ಳವರ, ಸಮಾಜಪರ ವ್ಯಕ್ತಿಗಳ ಧನಾತ್ಮಕ ಸುದ್ದಿಯನ್ನೇ ಬರೆಯುತ್ತಿದ್ದಾರೆ. ಮುರುಗರಾಜರಿಗೆ ಅವರ ಬರಹಗಳ ಕುರಿತು ಒಬ್ಬ ಓದುಗ ನಿರಂತರ ಅಭಿಪ್ರಾಯಗಳನ್ನು ಹಂಚಿಕೊಳ್ಳುತ್ತಿದ್ದರು. ಅವರು ಮದುರೈ ಮೂಲದ ಸಿಂಗಾಪೂರದ ನಿವಾಸಿ ಮೋಹನ್ ರಾಜ್. ವಿಶೇಷವೆಂದರೆ ಮೋಹನ್ ರಾಜ್ ಕಳೆದ ಎರಡು ವರ್ಷಗಳಿಂದ ಮುರುಗರಾಜರ ಅಂಕಣದಲ್ಲಿ ಪರಿಚಯಿಸಿದ ವ್ಯಕ್ತಿಗಳನ್ನು ವೈಯಕ್ತಿಕವಾಗಿ ಸಂಪರ್ಕಿಸಿ ಅವರು ಮಾಡಿದ ಒಳ್ಳೆಯ ಕಾರ್ಯಕ್ಕೆ, ಸಾಧಿಸಿದ ಹಿರಿಮೆಗೆ ಪ್ರಾಮಾಣಿಕವಾಗಿ ಮೆಚ್ಚುಗೆಯನ್ನು ವ್ಯಕ್ತಪಡಿಸುವ ಪರಿಪಾಠವನ್ನು ಇಟ್ಟುಕೊಂಡಿದ್ದರು. ಅನೇಕ ಸಂದರ್ಭಗಳಲ್ಲಿ ಇಂತಹ ಸಾಧಕರಿಗೆ ಗೌಪ್ಯವಾಗಿ ತಮ್ಮ ಕೈಲಾದ ಸಹಾಯವನ್ನು ಮೋಹನ್ ನೀಡುತ್ತಿದ್ದಾರೆ. ತಮ್ಮ ಓದುಗನೊಬ್ಬನ ಈ ವಿಲಕ್ಷಣ ಮೌನಕಾರ್ಯ ಮುರುಗರಾಜ್‌ರ ಗಮನಕ್ಕೆ ಬಂದಿದ್ದು ತೀರಾ ಇತ್ತೀಚಿಗೆ. 'ಡಾ॥ ಅಬ್ದುಲ್ ಕಲಾಂ ಅವರ ಹೆಸರಿನ ತಮ್ಮ ಸೇವಾಸಂಸ್ಥೆಯ ಮುಖೇನ ಮೌನಸೇವೆ ಮಾಡುತ್ತಿರುವ ಮೋಹನ್ ಸ್ವಾತಂತ್ರ್ಯ ಸೇನಾನಿ ಧನುಷ್ಕೋಡಿ ರಾಜಾ ಅವರ ಪುತ್ರ.



**ಕೇವಲ 60 ಗಂಟೆ 6 ನಿಮಿಷ, 6 ಸೆಕೆಂಡ್‌ಗಳಲ್ಲಿ 7,777 ಸುತ್ತು ಸೂರ್ಯ ನಮಸ್ಕಾರ ಮಾಡುವ ಮೂಲಕ 28 ವರ್ಷದ ಅರ್ಜುನ್ ಯೋಗಿ ವಿಶ್ವ ದಾಖಲೆ ಮಾಡಿದ್ದಾರೆ. ಪ್ರತೀ ವರ್ಷ ಜೂನ್ ತಿಂಗಳಿನಲ್ಲಿ ನಡೆಯುವ ಸೂರ್ಯ ನಮಸ್ಕಾರ ಸ್ಪರ್ಧೆಯಲ್ಲಿ 85 ಸದಸ್ಯರ ಗುಂಪು ಸ್ಪರ್ಧಿಸಿತ್ತು. ಇದರಲ್ಲಿ 14 ಮಂದಿ ಮಾತ್ರ ಸವಾಲನ್ನು ಸ್ವೀಕರಿಸಿ, ದಾಖಲೆ ಮೆಟ್ಟಿಲನ್ನು ಹತ್ತಿದ್ದಾರೆ. 14 ಮಂದಿಯಲ್ಲಿ 8 ಜನರ ಗುಂಪು ಕರ್ನಾಟಕದವರಾಗಿದ್ದು, ಇಬ್ಬರು ತಮಿಳುನಾಡಿನವರು ಹಾಗೂ ನಾಲ್ವರು ವಿಯೆಟ್ನಾಂ ಮೂಲದವರಾಗಿದ್ದಾರೆ. ಕರ್ನಾಟಕದ ಹುಬ್ಬಳ್ಳಿ ಮೂಲದ ಅರ್ಜುನ್ ಅವರು ವಿಶ್ವ ದಾಖಲೆ ಮಾಡುವುದಕ್ಕಾಗಿಯೇ ಕಳೆದ 13 ವರ್ಷಗಳಿಂದ ಸತತ ಯೋಗ ಅಭ್ಯಾಸ ಮಾಡುತ್ತಿದ್ದರು.**

ಭಾರತೀಯ ಯೋಧರ ಶೌರ್ಯ ಪರಾಕ್ರಮಗಳಷ್ಟೇ ಅವರ ಹೃದಯವೈಶಾಲ್ಯ ಮತ್ತು ಸಂವೇದನೆಗಳೂ ಪ್ರಸಿದ್ಧ. ಇಂತಹ ಒಂದು ಘಟನೆ ನೇಪಾಳ ಗಡಿಯಲ್ಲಿ ನಡೆಯಿತು. ಬಿಹಾರಕ್ಕೆ ಹೊಂದಿಕೊಂಡಿರುವ ನೇಪಾಲದ ರೌತಾಹತ್ ಜಿಲ್ಲೆಯ ನಿವಾಸಿ ನವೀನ್ ಕುಮಾರ್ ಸಿಂಗ್‌ರ ನವಜಾತ ಅವಳಿಗಳು ವಿರಳ ರಕಸಂಬಂಧಿ ಕಾಯಿಲೆಗೆ ತುತ್ತಾಗಿದ್ದರು. ಅವರಿಗೆ O-ve ಗುಂಪಿನ ರಕ್ತ ಬೇಕಾಗಿತ್ತು. ಆದರೆ ಆ ಪ್ರಾಂತೆದಲ್ಲೆಲ್ಲೂ ಆ ಮಾದರಿಯ ರಕ್ತದೊರಕದೇ ಸಂಕಷ್ಟ ಅನುಭವಿಸಿದರು. ಇದನ್ನು ತಿಳಿದ ಭಾರತೀಯ ಸೇನೆಯ 11ನೆ ತುಕಡಿಯ ಅಸಿಸ್ಟೆಂಟ್ ಕಮಾಂಡೆಂಟ್ ವಿಜಯ್ ಇಸ್ಸರ್, ತನ್ನದು ಅದೇ ಮಾದರಿಯ ರಕ್ತವಾಗಿದ್ದು, ತಾನು ರಕ್ತದಾನ ಮಾಡುವುದಾಗಿ ತಿಳಿಸಿದರು. ನೆರೆಯ ನೇಪಾಳದ ಸೇನಾಧಿಕಾರಿಗಳನ್ನು ಸಂಪರ್ಕಿಸಿ, ಅವರಿಂದ ಅನುಮತಿ ಪಡೆದು ನೇಪಾಳದ ಬ್ರಜಾಹಾ ಹಳ್ಳಿಗೆ ತೆರಳಿ ವಿಜಯ್ ರಕ್ತ ದಾನಮಾಡಿದರು. ಇದರಿಂದ ಆ ಅವಳಿಗಳು ಕಣ್ಣು ಬಿಡುವಂತಾಗಿದೆ.

**ಸಮಾನ ನಾಗರಿಕ ಸಂಹಿತೆಯನ್ನು ಜಾರಿ ಮಾಡುವುದಕ್ಕೆ ಇರುವ ಸಮಸ್ಯೆಗಳೇನು ಎಂಬುದನ್ನು ಪರಿಶೀಲನೆ ನಡೆಸುವಂತೆ ಕಾನೂನು ಆಯೋಗಕ್ಕೆ ಕೇಂದ್ರ ಸರ್ಕಾರ ಸೂಚನೆ ನೀಡಿದೆ. ಮುಸ್ಲಿಮರಲ್ಲಿ ಪ್ರಚಲಿತವಿರುವ 'ಮೂರು ತಲಾಖ್' ಪದ್ಧತಿಯ ಸಾಂವಿಧಾನಿಕ ಮೌಲ್ಯದ ಬಗ್ಗೆ ತೀರ್ಪು ನೀಡುವ ಮೊದಲು ಇದಕ್ಕೆ ಸಂಬಂಧಿಸಿ ವ್ಯಾಪಕ ಚರ್ಚೆ ನಡೆಯಬೇಕು ಎಂದು ಇತ್ತೀಚೆಗೆ ಸುಪ್ರೀಂ ಕೋರ್ಟ್ ಹೇಳಿತ್ತು. ವಿಚ್ಛೇದನ ಪಡೆಯುವುದಕ್ಕಾಗಿ ಮುಸ್ಲಿಂ ಗಂಡಸರು 'ಮೂರು ತಲಾಖ್' ಪದ್ಧತಿಯನ್ನು ಮನಸೋ ಇಚ್ಛೆ ಬಳಸುತ್ತಿದ್ದಾರೆ ಎಂಬ ದೂರುಗಳ ಕಾರಣ ಸುಪ್ರೀಂ ಕೋರ್ಟ್ ಚರ್ಚೆಗೆ ಕರೆ ನೀಡಿತ್ತು. ಏಕರೂಪ ನಾಗರಿಕ ಸಂಹಿತೆಯ ಬಗ್ಗೆ ಸಂವಿಧಾನದಲ್ಲಿಯೇ ಪ್ರಸ್ತಾವ ಇದೆ. ಆದರೆ ವೋಟ್ ಬ್ಯಾಂಕ್ ರಾಜಕಾರಣದ ಕಾರಣದಿಂದ ಅದನ್ನು ಹಲವರು ವಿರೋಧಿಸುತ್ತಿದ್ದಾರೆ ಎಂದು ಬಿಜೆಪಿ ಹೇಳಿದೆ.**




ಅಂಚೆ ಇಲಾಖೆಯು ಅಂಚೆ ಚೀಟಿಗಳಲ್ಲಿ ಸಾರ್ವಜನಿಕರ ಆಯ್ಕೆಯ ವೈಯಕ್ತಿಕ ಚಿತ್ರಗಳ ಮುದ್ರಿಸಿಕೊಡುವ ಮೂಲಕ ಜನರಿಗೆ ಮತ್ತಷ್ಟು ಹತ್ತಿರವಾಗಲು ನಿರ್ಧರಿಸಿದೆ. ವಧು, ವರರ ಭಾವಚಿತ್ರಗಳು, ಹುಟ್ಟುಹಬ್ಬದ ಚಿತ್ರಗಳು, ಸಭೆ, ಸಮಾರಂಭಗಳು, ಸ್ಮಾರಕಗಳು, ಧಾರ್ಮಿಕ ಕೇಂದ್ರಗಳ ಚಿತ್ರಗಳನ್ನು ಮುದ್ರಿಸಬಹುದು. ಗ್ರಾಹಕರು ಅಂಚೆ ಕಚೇರಿಗೆ ತೆರಳಿ 300 ರೂಪಾಯಿ ನೀಡಿದರೆ, ಇಲಾಖೆಯ ಸಿಬ್ಬಂದಿಗಳು ಕೆಲವೇ ನಿಮಿಷಗಳಲ್ಲಿ ಜನರ ಆಯ್ಕೆಯ ಭಾವ ಚಿತ್ರಗಳನ್ನು ಅಂಚೆ ಚೀಟಿಯಲ್ಲಿ ಮುದ್ರಿಸಿಕೊಡುತ್ತಾರೆ. ಒಟ್ಟು 12 ಅಂಚೆಚೀಟಿಗಳನ್ನು ಮುದ್ರಿಸಿಕೊಡಲು ನಿರ್ಧರಿಸಲಾಗಿದೆ. ಇದರಿಂದ ಇಲಾಖೆಯ ಆದಾಯ ಹೆಚ್ಚಳವಾಗಲಿದೆ ಎಂದು ಅಂಚೆ ಇಲಾಖೆ ತಿಳಿಸಿದೆ.

**ಸ್ವದೇಶಿ ನಿರ್ಮಿತ ಹಗುರ ಯುದ್ಧ ವಿಮಾನ 'ತೇಜಸ್' ಮುಂದಿನ ವರ್ಷ ಭಾರತೀಯ ವಾಯುಪಡೆ ಸೇವೆಗೆ ನಿಯೋಜನೆಯಾಗಲಿದ್ದು, ಗಡಿ**



**ಕಾಯುವ ಕೆಲಸಕ್ಕೆ ಬಳಕೆಯಾಗಲಿದೆ. ಬೆಂಗಳೂರಿನ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ನಿರ್ಮಿಸಿರುವ ಈ ಯುದ್ಧ ವಿಮಾನ 2 ವರ್ಷಗಳವರೆಗೆ ಬೆಂಗಳೂರಿನಲ್ಲಿರಲಿದ್ದು, ಆನಂತರ ತಮಿಳುನಾಡಿನ ಸೂಲೂರಿನಲ್ಲಿರುವ ವಾಯುನೆಲೆಗೆ ಸ್ಥಳಾಂತರಗೊಳ್ಳಲಿವೆ. 2017 ಮತ್ತು 18ರ ವೇಳೆಗೆ ಒಟ್ಟು 20 ತೇಜಸ್ ಯುದ್ಧ ವಿಮಾನಗಳು (ಒಂದು ಆಸನದ 16 ಮತ್ತು ಎರಡು ಆಸನಗಳ 4) ವಾಯುಪಡೆಯಲ್ಲಿ ಸೇವೆಗೆ ನಿಯೋಜನೆಯಾಗಲಿವೆ.**

# ಸಾಲುದ್ದದ ಸುದ್ದಿಗಳು

ದೆಹಲಿಯ ಕಸ್ತೂರಿರಾಮ್ ಕಾಲೇಜಿನ ವಿದ್ಯಾರ್ಥಿನಿಯಾದ 19 ವರ್ಷದ ಪರಿಧಿ ಭಟ್ನಾಗರ್‌ಗೆ ಛಾಯಾಚಿತ್ರಗಾರ್ತಿ ಮತ್ತು ಪತ್ರಕರ್ತೆಯಾಗುವ ಹಂಬಲ. ನಿತ್ಯವೂ ತನ್ನ ಕ್ಯಾಮೆರಾ ಮತ್ತು ಲ್ಯಾಪ್‌ಟಾಪ್ ಹಾಗು ಮಿಠಾಯಿ ಡಬ್ಬಗಳನ್ನು ಹೆಗಲಿಗೆರೆಸಿಕೊಂಡು ದೆಹಲಿಯ ರೋಹಿಣಿ ಸೆಕ್ಟರ್ 11 ರಲ್ಲಿ ದಯನೀಯ ಪರಿಸ್ಥಿತಿಯಲ್ಲಿರುವ ನಿರಾಶ್ರಿತರ ವಸತಿ ಕೇಂದ್ರಕ್ಕೆ ಭೇಟಿ ನೀಡುತ್ತಾಳೆ. ಪರಿಧಿ ಬಂದೊಡನೆ ವಸತಿಯ ಮಕ್ಕಳು ಆಕೆಯನ್ನು ಮುತ್ತುತಾರೆ. ಆಕೆ ತಂದ ಸಿಹಿತಿಂಡಿ ಅಷ್ಟೇ ಅಲ್ಲ ಎಣಿಕೆ, ಮಗ್ಗಿ, ಬರವಣಿಗೆ, ಓದು ಎಲ್ಲವನ್ನೂ ಆಕೆಯಿಂದ ಪಡೆಯುತ್ತಿದ್ದಾರೆ. ಪಾಠ ನಡೆಯುವ ಚಿಕ್ಕ ಕೋಣೆಯ ಗೋಡೆಯ ಮೇಲೆ ಮಕ್ಕಳಿಗೆ ಭವಿಷ್ಯದ ದಿಕ್ಕು ತೋರಿಸುವ ಹನುಮಂತ, ದುರ್ಗೆ, ರಾಧಾಕೃಷ್ಣರ ಮತ್ತು ಸಂಘಸ್ಥಾಪಕ ಡಾ॥ ಹೆಡಗೇವಾರರ ಚಿತ್ರಗಳಿವೆ.

ದೆಹಲಿಯ ಗುಡಿಸಿಲಿನಲ್ಲಿ ತಮ್ಮ ಬಾಲ್ಯ ಸವೆಸತ್ತಿರುವ ಈ ಕಂದಮ್ಮಗಳ ಹೆತ್ತವರು ಜೀವ ಉಳಿದರೇ ಸಾಕೆಂದು ಪಾಕಿಸ್ತಾನದಿಂದ ಓಡಿಬಂದಿರುವ ನಿರ್ಭಾಗ್ಯ ಅಲ್ಪಸಂಖ್ಯಾತರು. ಖಾಸಗಿ ಸಂಸ್ಥೆಯ (Movement for Solidarity and Peace) ವರದಿ ಪ್ರಕಾರ ದಿನಂಪ್ರತಿ 1000 ಮಹಿಳೆಯರು – 700 ಕ್ರೈಸ್ತರು ಮತ್ತು 300 ಹಿಂದುಗಳು ಪಾಕಿಸ್ತಾನದಲ್ಲಿ ಬಲವಂತದಿಂದ ಇಸ್ಲಾಂಗೆ ಸೇರ್ಪಡೆಗೊಳ್ಳುತ್ತಾರೆ. ಹೀಗೆ ಬಲವಂತದ ಮತಾಂತರ ಮತ್ತು ದೌರ್ಜನ್ಯವನ್ನು ತಪ್ಪಿಸಿಕೊಳ್ಳಲು ಪಾಕಿಸ್ತಾನದಿಂದ ಭಾರತಕ್ಕೆ ಓಡಿಬರುವ ದೊಡ್ಡ ಗುಂಪುಗಳು ದೆಹಲಿಯ ಬೀದಿಗಳಲ್ಲಿ ನಿರಾಶ್ರಿತರ ವಸತಿಗಳಲ್ಲಿ ನೆಲೆಸಿವೆ. ಸಾಮಾನ್ಯ ಸೌಲಭ್ಯಗಳಿಲ್ಲದೇ, ಬಡತನವೇ ತುಂಬಿರುವ ನಿರಾಶ್ರಿತರ ಶಿಬಿರದ ಮಕ್ಕಳಲ್ಲಿಯೂ ಸಾಮರ್ಥ್ಯವಿದೆ. ಆದರೆ ಕನಸು ಕಟ್ಟಿಸಿ, ಮೇಲಕ್ಕೆ ತರುವವರಾರು? ಅದೊಂದು ದಿನ ಪರೀಧಿಗೆ ದೆಹಲಿಯ ರೋಹಿಣಿ ಸೆಕ್ಟರ್‌ನ 7 ವರ್ಷ ವಯಸ್ಸಿನ ರಾಜನಂದಿನಿಯ ಭೇಟಿಯಾಯಿತು. ರಾಜನಂದಿನಿಯ ವಸತಿಯ ಚಿತ್ರಣವನ್ನು ಕಣ್ಣಾರೆ ಕಂಡ ಪರಿಧಿಗೆ ಅಲ್ಲಿನ ಮಕ್ಕಳಲ್ಲಿ ಕನಸು ಕಟ್ಟಿ, ನನಸು ಮಾಡುವ ಸಂಕಲ್ಪ ತೊಟ್ಟರು. ಇದೀಗ ಸುಮಾರು 200 ಮಕ್ಕಳು ಪರಿಧಿಯ ಆರೈಕೆ ಪಡೆಯುತ್ತಿದ್ದಾರೆ.

**2015ರಲ್ಲಿ ಕೇಂದ್ರ ಇಂಧನ ಸಚಿವಾಲಯ ಬಿಡುಗಡೆ ಮಾಡಿದ ವರದಿಯಂತೆ, ಭಾರತ ಸೌರಶಕ್ತಿ ಉತ್ಪಾದನೆಯ ಈಗಿನ ವೇಗವನ್ನು ಕಾಯ್ದುಕೊಂಡರೆ 2020ರ ವೇಳೆಗೆ ಒಟ್ಟು ವಿದ್ಯುತ್ ಬೇಡಿಕೆಯ ಶೇ. 5.7ರಷ್ಟು ಅಂದರೆ 54 ಗಿಗಾವಾಟ್, 2025ರ ಹೊತ್ತಿಗೆ 166 ಗಿಗಾವಾಟ್ (ಶೇ. 12.5) ಉತ್ಪಾದನೆ ಸಾಧ್ಯವಾಗಲಿದೆ. ಅಲ್ಲದೆ, ಭಾರತದ 18 ಸಾವಿರ ಹಳ್ಳಿಗಳಿಗೆ ಸಾಂಪ್ರದಾಯಿಕ ವಿದ್ಯುತ್ ಪೂರೈಕೆ ಸಾಧ್ಯವಿಲ್ಲ. ಹಾಗಾಗಿ ಸೌರವಿದ್ಯುತ್ತನ್ನು ಜನಪ್ರೀಯಗೊಳಿಸುವ ಯೋಜನೆ ಹಾಕಿಕೊಂಡಿರುವ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಈಗಾಗಲೇ 2,800 ಹಳ್ಳಿಗಳಿಗೆ ಸೌರಬೆಳಕು ತಲುಪಿಸುವಲ್ಲಿ ಯಶಸ್ವಿಯಾಗಿದೆ. 2022ರ**

## ನಿಶಿತಾ ರಜಪೂತ್

**ಗುಜರಾತ್ ಮೂಲದ ನಿಶಿತಾ ರಜಪೂತ್ ಅವರು ಬಡ ಹೆಣ್ಣು ಮಕ್ಕಳಿಗೆ ಉಚಿತ ಶಿಕ್ಷಣ ಕೊಡುವ ಕಾಯಕದಲ್ಲಿ ನಿರತರಾಗಿದ್ದಾರೆ. 'ನಿಶಿತಾ ಮಿಷನ್' ಸಂಸ್ಥೆ ಮೂಲಕ ಶಿಕ್ಷಣ ಸೇವೆ ಮಾಡುತ್ತಿದ್ದಾರೆ. ಅತಿ ಕಿರಿಯ ವಯಸ್ಸಿಗೆ ಹಿರಿದಾದ ಸಾಧನೆ ಅವರದ್ದು.**

**24 ವರ್ಷದ ನಿಶಿತಾ ವಾಣಿಜ್ಯ ಪದವೀಧರೆ. ತಮ್ಮ ಮನೆಗೆ ಕೆಲಸ ಮಾಡಲು ಬರುತ್ತಿದ್ದ 10 ವರ್ಷದ ಶಿಕ್ಷಣ ವಂಚಿತ ಬಾಲಕಿಯ ಪ್ರಭಾವದಿಂದಾಗಿ ನಿಶಿತಾ ಮಿಷನ್ ಆರಂಭಿಸಿದ್ದಾರೆ. ಕೌಟುಂಬಿಕ ದೌರ್ಜನ್ಯ, ಬಡತನದಿಂದಾಗಿ ಶಿಕ್ಷಣದಿಂದ ದೂರ ಉಳಿದು ಮನೆ ಕೆಲಸ, ಹೋಟೆಲ್ ಕೆಲಸ ಸೇರಿದಂತೆ ಬಾಲಕಾರ್ಮಿಕರಾಗಿ ದುಡಿಯುತ್ತಿರುವ ಬಾಲಕಿಯರನ್ನು ಗುರುತಿಸಿ ಅವರಿಗೆ ವಸತಿಯುತ ಶಿಕ್ಷಣ ಕೊಡುವ ಕೆಲಸವನ್ನು ನಿಶಿತಾ ಮಿಷನ್ ಮಾಡುತ್ತಿದೆ. ಇದಕ್ಕಾಗಿ ಸರ್ಕಾರದಿಂದ ನಯಾ ಪೈಸೆ ನೆರವನ್ನೂ ಪಡೆಯದೇ ಪಾರದರ್ಶಕವಾಗಿ ದೇಣಿಗೆ ಸಂಗ್ರಹಿಸುವ ಮೂಲಕ ಹೆಣ್ಣು ಮಕ್ಕಳಿಗೆ ಆಸರೆಯಾಗಿದ್ದಾರೆ.**

**2011ರಿಂದ ಇಲ್ಲಿಯವರೆಗೆ ನೂರಾರು ವಿದ್ಯಾರ್ಥಿನಿಯರು ಆರ್ಥಿಕ ನೆರವು ಪಡೆದು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ನಿಶಿತಾ ಪ್ರತಿ ವರ್ಷವು 30 ರಿಂದ 40 ಲಕ್ಷ ರೂಪಾಯಿ ದೇಣಿಗೆ ಸಂಗ್ರಹ ಮಾಡುತ್ತಾರೆ. ಪ್ರಸಕ್ತ ವರ್ಷದಲ್ಲಿ 50 ಲಕ್ಷ ರೂಪಾಯಿ ಸಂಗ್ರಹ ಮಾಡಿರುವುದು ವಿಶೇಷ. ಶಿಕ್ಷಣ ವಂಚಿತ ಹೆಣ್ಣು ಮಕ್ಕಳು ಹಾಗೂ ಅವರ ಪೋಷಕರೊಂದಿಗೆ ಆಪ್ತಸಮಾಲೋಚನೆ ನಡೆಸಿದ ಬಳಿಕವೇ ಅವರ ಸಮಸ್ಯೆಗಳನ್ನು ಅರಿತು ಪುನರ್ವಸತಿ ಕಲ್ಪಿಸಲಾಗುವುದು. ಆ ಮಕ್ಕಳು ಓದ ಬಯಸುವ ಶಾಲೆಗೆ ದಾಖಲಿಸಿ ಪಿಯುಸಿವರೆಗೂ ಶಿಕ್ಷಣ ಕೊಡಿಸಲಾಗುವುದು. ತಮ್ಮ ಮಿಷನ್ ಮೂಲಕ ಸಾಕಷ್ಟು ಹಣ ಸಂಗ್ರಹಿಸಿ ಇನ್ನೂ ಹೆಚ್ಚಿನ ಹೆಣ್ಣು ಮಕ್ಕಳಿಗೆ ನೆರವಾಗಬೇಕು ಎಂಬುದು ನಿಶಿತಾ ಅವರ ಹಂಬಲ. www.nishitamission.org**



**ಹೊತ್ತಿಗೆ 20 ದಶಲಕ್ಷ ಸೋಲಾರ್ ಲ್ಯಾಂಪ್ ಬಳಕೆಯ ಗುರಿಯನ್ನೂ ಇರಿಸಿಕೊಂಡಿದೆ. ಕೃಷಿ, ಕೈಗಾರಿಕೆ ರಂಗದಲ್ಲೂ ಸೌರವಿದ್ಯುತ್ ಬಳಕೆ ಹೆಚ್ಚಿಸಲು ಸರ್ಕಾರ ಸಬ್ಸಿಡಿ ನೀಡಿದೆ. ಈ ಹೆಜ್ಜೆಗಳು ವಿದ್ಯುತ್ ಸ್ವಾವಲಂಬನೆ ನಿಟ್ಟಿನಲ್ಲಿ ಮಹತ್ವದ್ದೆನ್ನಬಹುದು. ವರ್ಷದಲ್ಲಿ 300 ದಿನ ಬಿಸಿಲು, ಸೂರ್ಯನ ಹೇರಳ ಶಾಖ ಹೊಂದಿರುವ ಭಾರತ ಸೌರಶಕ್ತಿ ಉತ್ಪಾದನೆಗೆ ಅನುಕೂಲಕರವಾದ ರಾಷ್ಟ್ರ. ಭಾರತ ಸೌರಶಕ್ತಿ ಉತ್ಪಾದನೆಯಲ್ಲಿ ಅಂತಾರಾಷ್ಟ್ರೀಯ ವಲಯಕ್ಕೆ ಮಾದರಿಯಾಗುವ ಗುರಿ ಇರಿಸಿಕೊಂಡಿದೆ. ಇದೇ ಉದ್ದೇಶದಿಂದ ಪ್ಯಾರಿಸ್‌ನಲ್ಲಿ ನಡೆದ ವಿಶ್ವ ಹವಾಮಾನ ಶೃಂಗಸಭೆಯ ಫಲವಾಗಿ ಭಾರತದ ನೇತೃತ್ವದಲ್ಲಿ ಅಂತಾರಾಷ್ಟ್ರೀಯ ಸೌರಶಕ್ತಿ ಒಕ್ಕೂಟ (ಐಎಎಸ್) ನಿರ್ಮಾಣಗೊಂಡಿದ್ದು, 121 ರಾಷ್ಟ್ರಗಳು ಇದರ ಸದಸ್ಯತ್ವ ಪಡೆದಿವೆ.**

ದೇಶಾದ್ಯಂತ ಮುಂಗಾರು ಬಿರುಸು ಪಡೆದಿದ್ದರೂ, ಕರ್ನಾಟಕದ್ದೂ ಸೇರಿದಂತೆ ಪ್ರಮುಖ 91 ಅಣೆಕಟ್ಟುಗಳಲ್ಲಿ ಶೇ. 15ರಷ್ಟು ಮಾತ್ರ ನೀರು ತುಂಬಿದೆ ಎಂಬ ವಿಚಾರವನ್ನು ಕೇಂದ್ರ ಸರಕಾರ ಹೊರಗೆಡವಿದೆ. ಜೂ.30ರ ವೇಳೆಗೆ ಈ ಅಣೆಕಟ್ಟುಗಳಲ್ಲಿ 2394 ಕೋಟಿ ಕ್ಯೂ. ಮೀ. (1 ಕ್ಯೂಬಿಕ್ ಮೀ. ಅಂದರೆ ಸಾವಿರ ಲೀ.) ನೀರು ಮಾತ್ರವೇ ತುಂಬಿದೆ ಎಂದು ಕೇಂದ್ರ ಜಲಸಂಪನ್ಮೂಲ ಸಚಿವಾಲಯ ಹೇಳಿದೆ. ದೇಶದ ಎಲ್ಲಾ ಅಣೆಕಟ್ಟುಗಳ ನೀರು ಸಂಗ್ರಹಣೆ ಸಾಮರ್ಥ್ಯ 15,779.9 ಕೋಟಿ ಕ್ಯೂ.ಮೀ. ಆಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ, ಶೇ.52ರಷ್ಟು ನೀರು ತುಂಬಿದ್ದು ಕಡಿಮೆಯಾಗಿದೆ. ನೀರಿನ ಅಗತ್ಯವನ್ನು ಅರಿತು, ಮಿತವ್ಯಯ ಮತ್ತು ನೀರಿನ ಸಂರಕ್ಷಣೆಗೆ ವೈಯಕ್ತಿಕ ಆಸಕ್ತಿ ವಹಿಸುವ ಸಂಕಲ್ಪ ತೋಡುವ ಅಗತ್ಯವಿದೆ.

## ಈ ವರ್ಷದಿಂದ 'ಸ್ವಚ್ಛ ವಿದ್ಯಾಲಯ ಪುರಸ್ಕಾರ'

ಸರ್ಕಾರಿ ಶಾಲಾ ಆವರಣದಲ್ಲಿ ಸ್ವಚ್ಛತೆ, ನೈರ್ಮಲ್ಯ ಕಾಪಾಡಲು ಮತ್ತು ಸಮರ್ಪಕ ಕುಡಿಯುವ ನೀರು ಪೂರೈಕೆ ಪ್ರೋತ್ಸಾಹಿಸುವ ಉದ್ದೇಶದಿಂದ ಕೇಂದ್ರ ಮಾನವ ಸಂಪನ್ಮೂಲ ಇಲಾಖೆಯು (ಎಚ್‌ಆರ್‌ಡಿ) ಈ ವರ್ಷದಿಂದ 'ಸ್ವಚ್ಛ ವಿದ್ಯಾಲಯ ಪುರಸ್ಕಾರ'ವನ್ನು ನೀಡಲಿದೆ. ಜಿಲ್ಲಾ, ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ನೀಡಲಾಗುವ ಈ ಪುರಸ್ಕಾರವನ್ನು ಪಡೆಯಲು ದೇಶದ ಗ್ರಾಮೀಣ ಮತ್ತು ನಗರ ಪ್ರದೇಶದ ಎಲ್ಲ ಸರ್ಕಾರಿ ಶಾಲೆಗಳು ಸ್ಪರ್ಧಿಸಬಹುದು. ರಾಷ್ಟ್ರೀಯ ಮಟ್ಟದಲ್ಲಿ ಪ್ರಶಸ್ತಿಗೆ ಆಯ್ಕೆಯಾಗುವ ಶಾಲೆಗಳಿಗೆ ನೈರ್ಮಲ್ಯ ವ್ಯವಸ್ಥೆಯ ಸುಧಾರಣೆಗೆ ಕೇಂದ್ರ ಸರ್ಕಾರ ಹೆಚ್ಚುವರಿಯಾಗಿ 50 ಸಾವಿರ ಧನಸಹಾಯ ನೀಡಲಿದೆ. ಪ್ರಾಥಮಿಕ ಮತ್ತು ಮಾಧ್ಯಮಿಕ ವಲಯದ ತಲಾ 100 ಶಾಲೆಗಳಿಗೆ (ಗ್ರಾಮೀಣ ಪ್ರದೇಶದಿಂದ 70 ಹಾಗೂ ನಗರ ಪ್ರದೇಶದಿಂದ 30 ಶಾಲೆಗಳು) ರಾಷ್ಟ್ರಮಟ್ಟದ ಸ್ವಚ್ಛ ಭಾರತ ಪುರಸ್ಕಾರ ನೀಡಲಾಗುತ್ತದೆ. ರಾಜ್ಯ ಮಟ್ಟ ಮತ್ತು ಕೇಂದ್ರಾಡಳಿತ ಪ್ರದೇಶದಲಿ ನಡೆಯುವ ಸ್ಪರ್ಧೆಗಳಲ್ಲಿ ಆಯ್ಕೆಯಾಗುವ ತಲಾ 40 ಶಾಲೆಗಳನ್ನು ರಾಷ್ಟ್ರೀಯ ಪ್ರಶಸ್ತಿಗೆ ಸ್ಪರ್ಧಿಸಲು ಅವಕಾಶ ನೀಡಲಾಗುತ್ತದೆ. ಜತೆಗೆ 10 ಅತ್ಯುತ್ತಮ ಜಿಲ್ಲೆಗಳನ್ನು ಗುರುತಿಸಿ ಪ್ರಮಾಣಪತ್ರವನ್ನೂ ಸರ್ಕಾರ ನೀಡಲಿದೆ. ಸ್ವಚ್ಛ ವಿದ್ಯಾಲಯ ಪುರಸ್ಕಾರಕ್ಕೆ ಸ್ಪರ್ಧಿಸಬಯಸುವ ಅರ್ಹಶಾಲೆಗಳ ಮುಖ್ಯ ಶಿಕ್ಷಕರು ಆನ್‌ಲೈನ್ ಮೂಲಕ http://mhrd.gov.in ಶಾಲೆಯನ್ನು ನೋಂದಾಯಿಸಿಕೊಳ್ಳಬಹುದು.




पुंगव PUNGAVA
# 74, Ranga Rao Road,
Shankarapuram, Bangalore - 560 004.
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALURU PSO, BG-560 026 on 10/25 of every Month REG.NO.CPMG/KA/BGS/102/2015-17
15-7-2016



# ನಾಗೌರ್ : ಭಾರತದ ಅತೀ ವಿಶಾಲ ಗೋವುಗಳ ಆಸ್ಪತ್ರೆ



ರಾಜಸ್ಥಾನದ ನಾಗೌರ್‌ನಲ್ಲಿ ರೋಗಿಷ್ಟ, ಗಾಯಾಳು ಅಥವಾ ವಿರೂಪಗೊಂಡಿರುವ ಆಕಳು, ಎತ್ತು ಮತ್ತು ಕರುಗಳ ಶುಶ್ರೂಷೆ ಮತ್ತು ಚಿಕಿತ್ಸೆಗಾಗಿ ಆಸ್ಪತ್ರೆಯೊಂದು ಕಾರ್ಯನಿರ್ವಹಿಸುತ್ತಿದೆ. ವಿಶಿಷ್ಟ ಗೋವುಗಳ ಈ ಆಸ್ಪತ್ರೆಯಲ್ಲಿ 1600 ಗೋವುಗಳು ಶುಶ್ರೂಷೆ ಪಡೆಯುತ್ತಿವೆ. 2008ರಲ್ಲಿ ನಂದಾ ಕಾಮಧೇನು ಎಂಬ ಒಂದು ಆಕಳಿನಿಂದ ಪ್ರಾರಂಭವಾದ ಈ ಗೋಸೇವೆಯ ಹಿಂದಿರುವವರು ಸ್ವಾಮೀ ಕುಶಿಗಿರಿಜೀ ಮಹಾರಾಜ್ ಎಂಬ ನಿಸ್ಸಂಗ ವಿರಕ್ತರು.

ರೋಗ ಅಥವಾ ಗಾಯದ ತೀವ್ರತೆಯ ಆಧಾರದ ಮೇಲೆ ವಿಶಾಲವಾದ ಟೆಂಟ್‌ಗಳಲ್ಲಿ ಪ್ರತ್ಯೇಕ ಆಶ್ರಯ ಒದಗಿಸಲಾಗಿದೆ. ಅಪಘಾತದಲ್ಲಿ ಕಾಲು ಕಳೆದುಕೊಂಡ, ಸ್ತನಕ್ಯಾನ್ಸರ್‌ಗೆ ತುತ್ತಾದ, ಆಹಾರದ ಮುಖೇನ ಹೊಟ್ಟೆ ಸೇರಿರುವ ಪ್ಲಾಸ್ಟಿಕ್‌ನಿಂದಾಗಿ ಹೊಟ್ಟೆನೋವಿನಿಂದ ಬಳಲುವ ಆಕಳುಗಳನ್ನು ನೋಡಿಕೊಳ್ಳಲು ಪ್ರತ್ಯೇಕ ವಾರ್ಡ್‌ಗಳಿವೆ. ವಿಶೇಷವೆಂದರೆ ಗೋವು ಮತ್ತದರ ಸಂತತಿಗಾಗಿಯೇ ಇಲ್ಲಿ ತೀವ್ರ ನಿಗಾ ಘಟಕವೂ ಇದೆ. ಆಸ್ಪತ್ರೆಯಲ್ಲಿ 21 ಚಿಕಿತ್ಸಾವಾಹನಗಳಿದ್ದು, 300 ಕೀ.ಮೀ ಪರಿಧಿಯಲ್ಲಿರುವ ಗೋವುಗಳ ಶುಶ್ರೋಷೆಯಲ್ಲಿ ಇವು ಕಾರ್ಯನಿರತವಾಗಿವೆ. ಈ ಆಸ್ಪತ್ರೆಯ ನಿತ್ಯದ ನಿರ್ವಹಣೆಗೆ ತಗಲುವ ಒಟ್ಟು ಖರ್ಚು ಸುಮಾರು 4.5 ಲಕ್ಷ ರೂಪಾಯಿ. ಗೋಭಕ್ತರು ದಾನವಾಗಿ ನೀಡುವ ಹಸಿರು ಹುಲ್ಲೂ ಸೇರಿದಂತೆ ಎಂಟು ಟನ್‌ಗಳಷ್ಟು ಗೋ ಖಾದ್ಯ ನಿತ್ಯ ಆಹಾರವಾಗಿ ಪ್ರಾಣಿಗಳಿಗೆ ನೀಡಲಾಗುತ್ತಿದೆ. ಹಿಮಾಲಯದಲ್ಲಿ ಸಂಸ್ಕರಿತ ನೀರನ್ನು ಗೋವುಗಳ ಆರೈಕೆಗೆ ನೀಡಲು ಟ್ಯಾಂಕರ್ ಗಳಿವೆ. ಇಷ್ಟೇ ಅಲ್ಲದೆ ಕರುಗಳಿಗೆ ವಿಶೇಷವಾದ ತೊಟ್ಟಿಲುಗಳು ಮತ್ತು ಚಳಿಗಾಲದಲ್ಲಿ ರಕ್ಷಣೆಗಾಗಿ ಕಂಬಳಿಗಳ ವ್ಯವಸ್ಥೆಯೂ ಆಸ್ಪತ್ರೆಯಲ್ಲಿದೆ.

# ‘ಬಯಲಿಗೆ’ ವಿದಾಯ ಹೇಳಿದ ಮೇಡಿತಂಬಳ್ಳಿ



ರಾಷ್ಟ್ರೀಯ ಹೆದ್ದಾರಿ 75ರಿಂದ ಕೂಗಳತೆ ದೂರದಲ್ಲಿರುವ ಕೋಲಾರ ಜಿಲ್ಲೆಯ ಹುತ್ತೂರು ಗ್ರಾಮ ಪಂಚಾಯಿತಿಯ ಮೇಡಿತಂಬಳ್ಳಿ ಗ್ರಾಮವು ಸರ್ಕಾರದ ನಿರ್ಮಲ ಗ್ರಾಮ ಪುರಸ್ಕಾರಕ್ಕೆ ಪಾತ್ರವಾಗಿದೆ.

ಬರಪೀಡಿತ ಜಿಲ್ಲೆ ಎಂಬ ಹಣೆಪಟ್ಟಿ ಕಟ್ಟಿಕೊಂಡಿರುವ ಕೋಲಾರ ಜಿಲ್ಲೆಯ ಭಾಗವಾಗಿರುವ ಮೇಡಿತಂಬಳ್ಳಿಯಲ್ಲಿ ಕುಡಿಯುವ ನೀರು ಸಿಗುವುದೇ ಕಷ್ಟ. ಜತೆಗೆ ಸತತ ಬರದಿಂದ ಬೆಳೆ ನಷ್ಟವಾಗಿ ಕಷ್ಟದ ದಿನಗಳನ್ನು ಎಣಿಸುತ್ತಿರುವ ಗ್ರಾಮಸ್ಥರು ಸಾವಿರಾರು ರೂಪಾಯಿ ಖರ್ಚು ಮಾಡಿ ಶೌಚಾಲಯ ಕಟ್ಟಿಸಿಕೊಳ್ಳುವುದು ದೂರದ ಮಾತು. ಹೀಗಾಗಿ ಪುರುಷರು, ಮಹಿಳೆಯರು ಸೇರಿದಂತೆ ಕುಟುಂಬ ಸದಸ್ಯರೆಲ್ಲಾ ಊರ ಹೊರಗಿನ ನೀಲಗಿರಿ ತೋಪಿನಲ್ಲಿ ಅಥವಾ ಕೆರೆ ಅಂಗಳ ಹಾಗೂ ದಂಡೆಯ ಪಕ್ಕದ ಖಾಲಿ ಜಾಗದಲ್ಲಿ ಬಹಿರ್ದೆಸೆಗೆ ಹೋಗುತ್ತಿದ್ದರು. ಮಹಿಳೆಯರು ನಸುಕಿನಲ್ಲಿ ಅಥವಾ ಮುಸ್ಸಂಜೆ ಆಗುವುದನ್ನೇ ಕಾದು ಹೆಣ್ಣು ಮಕ್ಕಳನ್ನು ಬಹಿರ್ದೆಸೆಗೆ ಕರೆದೊಯ್ಯುತ್ತಿದ್ದರು. ಮಳೆಗಾಲ ಬಂತೆಂದರೆ ಗ್ರಾಮಸ್ಥರ ಬವಣೆ ಹೇಳತೀರದಾಗಿತ್ತು.

ಈ ಪರಿಸ್ಥಿತಿಯನ್ನು ಸವಾಲಾಗಿ ಸ್ವೀಕರಿಸಿದ ಗ್ರಾಮ ಪಂಚಾಯಿತಿ ಸದಸ್ಯೆ ರತ್ನಮ್ಮ ಮತ್ತು ಪಿಡಿಒ ಜಿ. ಲಕ್ಷ್ಮಿ ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ಗ್ರಾಮದ ಪ್ರತಿ ಮನೆಯಲ್ಲೂ ಶೌಚಾಲಯ ನಿರ್ಮಾಣ ಮಾಡಿಸಿದ್ದಾರೆ. ಆ ಮೂಲಕ ಗ್ರಾಮವು ಬಯಲು ಬಹಿರ್ದೆಸೆ ಮುಕ್ತ ಗ್ರಾಮವಾಗಿ ರೂಪುಗೊಂಡಿದೆ.

ಈ ಉದ್ದೇಶ ಈಡೇರಿಕೆಗೆ ಹರಸಾಹಸ ಪಡಬೇಕಾಯಿತು. ಬಯಲಿನಲ್ಲಿ ಬಹಿರ್ದೆಸೆಗೆ ಹೋಗುವವರ ಮನೆಗೆ ಭೇಟಿ ಮಾಡಿ ಸರ್ಕಾರದ ಸಹಾಯ ಧನ ಒದಗಿಸಿ ಶೌಚಾಲಯ ನಿರ್ಮಾಣ ಮಾಡುವಂತೆ ಮಾಡಲಾಯಿತು. ಇನ್ನೊಂದು ಕಡೆ ಶೌಚಾಲಯ ಕಟ್ಟಿಸಿಕೊಂಡ ನಂತರವೂ ಅವುಗಳನ್ನು ಬಳಕೆ ಮಾಡದೆ ಬಯಲಿನಲ್ಲೇ ಬಹಿರ್ದೆಸೆಗೆ ಹೋಗುವುದು ಮುಂದುವರಿದಿತ್ತು. ಈ ಕಾರಣಕ್ಕಾಗಿ ಗ್ರಾಮ ಪಂಚಾಯಿತಿ ಸದಸ್ಯರು, ಸಿಬ್ಬಂದಿ ಹಾಗೂ ಗ್ರಾಮದ ಮುಖಂಡರು ಶೌಚಾಲಯ ಬಳಕೆ ಮಾಡದ ಕುಟುಂಬಗಳ ಮಾಹಿತಿ ಸಂಗ್ರಹಿಸಿದರು. ಶೌಚಾಲಯ ಬಳಕೆ ಮಾಡದಿದ್ದರೆ ಪಡಿತರ ಸೇರಿದಂತೆ ಎಲ್ಲಾ ಸರ್ಕಾರಿ ಸವಲತ್ತುಗಳನ್ನು ಕಡಿತಗೊಳಿಸುವುದಾಗಿ ಎಚ್ಚರಿಕೆ ನೀಡಿದರು. ಜತೆಗೆ ಯೋಜನೆಯ ಮೇಲ್ವಿಚಾರಣಾ ಅಧಿಕಾರಿಗಳು ಆಗಾಗ್ಗೆ ಗ್ರಾಮಕ್ಕೆ ಭೇಟಿ ನೀಡಿ ಬಯಲು ಬಹಿರ್ದೆಸೆಯಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ಬೀದಿನಾಟಕ, ಕರಪತ್ರ ಹಂಚಿಕೆ, ಗೋಡೆಬರಹ, ಜಾಥಾ, ಸಾರ್ವಜನಿಕ ಸಭೆ, ಕಿರುಚಿತ್ರ ಪ್ರದರ್ಶನಗಳ ಮೂಲಕ ಅರಿವು ಮೂಡಿಸಿ, ತಪ್ಪದೇ ಶೌಚಾಲಯ ಬಳಸುವಂತೆ ಮನವರಿಕೆ ಮಾಡಿಕೊಟ್ಟರು. ಇದರ ಪರಿಣಾಮ ಇಡೀ ಗ್ರಾಮ ಬಹಿರ್ದೆಸೆ ಮುಕ್ತ ಗ್ರಾಮವಾಗಿ ರೂಪುಗೊಂಡಿದೆ.



# ಸಕ್ಷಮ: ಕಾರ್ನಿಯ ಅಂಧತ್ವ ಮುಕ್ತ ಭಾರತ ಅಭಿಯಾನ

ದಿವ್ಯಾಂಗರ (ಅಂಗವಿಕಲರ) ಸಬಲೀಕರಣಕ್ಕಾಗಿ ಸೇವೆ ಸಲ್ಲಿಸುತ್ತಿರುವ ರಾಷ್ಟ್ರೀಯ ಸಂಘಟನೆ ‘ಸಕ್ಷಮ’ವು ‘ಕಾರ್ನಿಯ ಅಂಧತ್ವ ಮುಕ್ತ ಭಾರತ’ ಎಂಬ ಅಭಿಯಾನವನ್ನು ಹಮ್ಮಿಕೊಂಡಿದೆ. ಮಾರ್ಚ್ 5 ರಂದು ಈ ಅಭಿಯಾನಕ್ಕೆ ಚಾಲನೆ ನೀಡಲಾಗಿದ್ದು, ವಿವಿಧ ಹಂತಗಳಲ್ಲಿ ನಡೆಯಲಿದೆ. ಆಗಸ್ಟ್ 25 ರಿಂದ ಸೆಪ್ಟೆಂಬರ್ 8ರ ವರೆಗೆ ರಾಜ್ಯಾದ್ಯಂತ ರಾಷ್ಟ್ರೀಯ ನೇತ್ರದಾನ ಜಾಗೃತಿ ಪಾಕ್ಷಿಕ ಆಚರಣೆಯ ಸಂದರ್ಭದಲ್ಲಿ ಜಾಥಾ, ಬ್ಲೈಂಡ್ ವಾಕ್, ಬೀದಿ ನಾಟಕ ಹಾಗೂ ಶಾಲಾ ಕಾಲೇಜುಗಳಲ್ಲಿ ವಿವಿಧ ಸ್ಪರ್ಧೆಗಳು, ಮಾನವ ಸರಪಳಿ ರಚನೆ, ಮನೆ–ಮನೆ ಸಂಪರ್ಕ, ಲೇಖನ ಪ್ರಕಟಣೆ ಸೇರಿದಂತೆ ಹಲವು ರೀತಿಯ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಆಗಸ್ಟ್ 28ರಂದು ಸ್ವಯಂಸೇವಕರು ರಾಜ್ಯದ ಮನೆ–ಮನೆಗೆ ಭೇಟಿ ನೀಡಿ ಕಾರ್ನಿಯ ಅಂಧತ್ವದ ಕುರಿತು ಜಾಗೃತಿ ಮೂಡಿಸಲಿದ್ದಾರೆ.

ಕಾರ್ನಿಯ ಅಂಧತ್ವ, ಭಾರತ ಎದುರಿಸುತ್ತಿರುವ ಗಂಭೀರ ಆರೋಗ್ಯ ಸವಾಲುಗಳಲ್ಲೊಂದು. ಕಾರ್ನಿಯ ಎಂಬುದು ಕಣ್ಣಿನ ಹೊರಭಾಗದಲ್ಲಿನ ಪಾರದರ್ಶಕವಾದ ಭಾಗವಾಗಿದ್ದು, ಅನೇಕ ಕಾರಣಗಳಿಂದ ಇದು ದುರ್ಬಲಗೊಂಡು ಅಂಧತ್ವಕ್ಕೆ ಕಾರಣವಾಗುತ್ತದೆ. ಒಂದು ಅಂದಾಜಿನ ಪ್ರಕಾರ ಭಾರತದಲ್ಲಿ 2 ಲಕ್ಷದಿಂದ 20 ಲಕ್ಷ ಕಾರ್ನಿಯ ಅಂಧರಿದ್ದಾರೆ. ಇವರಲ್ಲಿ ಮಕ್ಕಳೇ ಅಧಿಕ. ಕಾರ್ನಿಯ ಅಂಧತ್ವಕ್ಕೆ ನೇತ್ರದಾನದಿಂದ ಮಾತ್ರ ಪರಿಹಾರ ಸಾಧ್ಯ. ಆದರೆ ಈಗಿರುವ ನೇತ್ರದಾನಿಗಳ ಸಂಖ್ಯೆ ಕೇವಲ 25 ಸಾವಿರ. ಈ ಸಂಖ್ಯೆಯನ್ನು 2 ರಿಂದ 4 ಲಕ್ಷಕ್ಕೆ ಹೆಚ್ಚಿಸಿದಲ್ಲಿ ಹಾಗೂ ಎಲ್ಲ ರಾಜ್ಯ, ಜಿಲ್ಲೆಗಳಲ್ಲಿ ನೇತ್ರಬ್ಯಾಂಕ್‌ಗಳನ್ನು ಸ್ಥಾಪಿಸಿದಲ್ಲಿ, ಕಾರ್ನಿಯ ತಜ್ಞರ ಲಭ್ಯತೆಯನ್ನು ಸುಧಾರಿಸಿದಲ್ಲಿ ಮತ್ತು ಅತಿ ಮುಖ್ಯವಾಗಿ ನೇತ್ರದಾನದ ಕುರಿತು ಜನರಲ್ಲಿರುವ ತಪ್ಪು ತಿಳುವಳಿಕೆಗಳನ್ನು ನಿವಾರಿಸಿದಲ್ಲಿ 2020ರ ಹೊತ್ತಿಗೆ ಭಾರತವನ್ನು ಕಾರ್ನಿಯ ಅಂಧತ್ವದಿಂದ ಮುಕ್ತಗೊಳಿಸಬಹುದಾಗಿದೆ. ‘ಕಾರ್ನಿಯ ಅಂಧತ್ವ ಮುಕ್ತ ಭಾರತ’ವಾಗಿಸುವ ಮಹತ್ವಾಕಾಂಕ್ಷೆಯ ಉದ್ದೇಶದಿಂದ ಸಕ್ಷಮ ಈ ಕಾರ್ಯಕ್ರಮಗಳನ್ನು ರೂಪಿಸಿದೆ.

# ಮಂಗಳೂರಿನಲ್ಲಿ ಧರ್ಮಸಂಸತ್




ಧರ್ಮಜಾಗರಣ ಸಮನ್ವಯ ವಿಭಾಗದಿಂದ ಮಂಗಳೂರಿನ ಸಂಘನಿಕೇತನದಲ್ಲಿ ಜುಲೈ 5ರಂದು ಅವಿಭಜಿತ ಜಿಲ್ಲೆಗಳ ಪೂಜ್ಯ ಸಾಧುಸಂತರ ‘ಧರ್ಮಸಂಸತ್’ ಕಾರ್ಯಕ್ರಮ ಜರಗಿತು. ಸಾಮರಸ್ಯಕ್ಕೆ ತೊಡಕಾಗಿರುವ ರಾಜಕೀಯ–ಜಾತೀಯ–ಸ್ವಾರ್ಥ ಪ್ರೇರಿತ ಸಂಗತಿಗಳನ್ನು ನಿವಾರಿಸಲು ‘ಧರ್ಮಸಂಸತ್’ನಲ್ಲಿ ನಿರ್ಣಯ ಕೈಗೊಳ್ಳಲಾಯಿತು. ಮತಾಂತರದ ಗಂಡಾಂತರ, ಪರಾವರ್ತನ (ಮರಳಿ ಮಾತೃಧರ್ಮಕ್ಕೆ ಕರೆತರುವುದು) ಮತ್ತು ಸಾಮರಸ್ಯ– ಸಂಸ್ಕಾರಗಳ ಕುರಿತು ಚರ್ಚೆ ನಡೆಯಿತು. ಹಿಂದು ಸಮಾಜದ ಹಿತರಕ್ಷಣೆಗಾಗಿ ಮಠ–ಮಂದಿರಗಳು ಮಾಡಬೇಕಾದ ಕಾರ್ಯಗಳ ಬಗ್ಗೆ ನಿರ್ಣಯ ಅಂಗೀಕರಿಸಲಾಯಿತು.

**ಓದುಗರೇ ಗಮನಿಸಿ**

**ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ: ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–04. ಮೊಬೈಲ್: 97391 83021**

# 52 ಮೀನುಗಾರರಿಗೆ ಪೌರೋಹಿತ್ಯ



ಸಾಮಾಜಿಕ ಸಾಮರಸ್ಯ ಮೂಡಿಸುವ ನಿಟ್ಟಿನಲ್ಲಿ ತಿರುಪತಿ ತಿರುಮಲ ದೇವಸ್ಥಾನಮ್ (ಟಿಟಿಡಿ)ನ ಆಡಳಿತ ಮಂಡಳಿ ದಿಟ್ಟ ಹೆಜ್ಜೆಯಿಟ್ಟಿದೆ. ದಲಿತ ಕಾಲೋನಿಗಳ ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಜನರ ಮನೆಗಳಿಗೆ ವೆಂಕಟೇಶ್ವರನನ್ನು ಕರೆದೊಯ್ದು ಕಲ್ಯಾಣೋತ್ಸವ ಆಚರಿಸುವ ‘ದಲಿತ ಗೋವಿಂದಂ’ಅನ್ನು ಪರಿಚಯಿಸಿರುವ ಟಿಟಿಡಿ, ಇದೀಗ ಮೀನುಗಾರರಿಗೆ ಸ್ಥಳೀಯ ದೇವಾಲಯಗಳಲ್ಲಿ ಧಾರ್ಮಿಕ ವಿಧಿ–ವಿಧಾನಗಳನ್ನು ನಿರ್ವಹಿಸಲು ತರಬೇತಿ ಕಾರ್ಯಕ್ರಮ ಆರಂಭಿಸಿದೆ. ಈಗಾಗಲೇ ತೆಲಂಗಾಣ ಹಾಗೂ ಆಂಧ್ರಪ್ರದೇಶದ 52 ಮಿನುಗಾರರಿಗೆ ಪೌರೋಹಿತ್ಯ ತರಬೇತಿ ನೀಡಲು ನಿರ್ಧರಿಸಿದೆ. ಈ ಮಿನುಗಾರರಿಗೆ ಮೂಲ ಅರ್ಚಕತ್ವ ತರಬೇತಿ ನೀಡಿದ ಬಳಿಕ ಪೌರೋಹಿತ್ಯ ತರಬೇತಿ ನೀಡಲಿದೆ.